# ಸೊಪ್ಪಿನ ಬೆಟ್ಟಗಳು

## ಕಾನೂನು ಮತ್ತು ಅಭಿವೃದ್ಧಿಯ ಅವಕಾಶಗಳು

ಬೆಟ್ಟ ಜಾಗೃತಿ ಅಭಿಯಾನದ ಅಂಗವಾಗಿ ಪ್ರಕಟಣೆ

# : ಸೊಪ್ಪಿನ ಬೆಟ್ಟಗಳು :

## ಕಾನೂನು ಮತ್ತು ಅಭಿವೃದ್ಧಿಯ ಅವಕಾಶಗಳು

ಬೆಟ್ಟ ಜಾಗೃತಿ ಅಭಿಯಾನದ ಅಂಗವಾಗಿ
ಪ್ರಕಟಣೆ

ಪಶ್ಚಿಮ ಘಟ್ಟ ಕಾರ್ಯ ಪಡೆ,

ಕರ್ನಾಟಕ ಸರಕಾರ,

ಶ್ರೀ ಶಾರದಾಂಬಾ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ,
ಭೈರುಂಭೆ

ಪ್ರಕಟಣೆ:
**ಅನಂತ ಹೆಗಡೆ, ಅಶೀಸರ,** ಅಧ್ಯಕ್ಷರು, ಪಶ್ಚಿಮಘಟ್ಟ
ಕಾರ್ಯಪಡೆ, ಕರ್ನಾಟಕ ಸರಕಾರ, ಬೆಂಗಳೂರು

**ನಾರಾಯಣ ಹೆಗಡೆ, ಗಡೀಕೈ,**
ಸಂಯೋಜಕರು, ಶ್ರೀ ಶಾರದಾಂಬಾ ಶಿಕ್ಷಣ ಹಾಗೂ
ಗ್ರಾಮೀಣಾಭಿವೃದ್ಧಿ ಸಂಸ್ಥೆ, ಭೈರುಂಬೆ, ತಾ: ಶಿರಸಿ

ಸಂಪಾದನೆ :
**ನರೇಂದ್ರ ಹೆಗಡೆ ಹೊಂಡಗಾಶಿ**
**ಡಾ. ವಾಸುದೇವ,** ಅರಣ್ಯ ಮಹಾವಿದ್ಯಾಲಯ, ಶಿರಸಿ
**ನರಸಿಂಹ ಹೆಗಡೆ, ವಾನಳ್ಳಿ**

ಮುದ್ರಣ: ಚಿತ್ರಲೇಖಾ ಮುದ್ರಣ, ಜಯನಗರ, ಶಿರಸಿ
ದೂರವಾಣಿ: (08384) 234555

# ಪೀಠಿಕೆ

**ಸೊಪ್ಪಿನ ಬೆಟ್ಟಗಳೆಂದರೆ ಅಡಿಕೆ ತೋಟಿಗರಿಗೆ ತಮ್ಮ ತೋಟದ ನಿರ್ವಹಣೆಗಾಗಿ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಉದ್ದೇಶದಿಂದ ನೀಡಲಾದ ಸಂರಕ್ಷಿತ ಅರಣ್ಯ ಪ್ರದೇಶ.**

ತಲೆ ತಲಾಂತರದಿಂದ ರೈತರು ಸಾಂಪ್ರದಾಯಿಕವಾಗಿ ಈ ಅರಣ್ಯಗಳನ್ನು ಅನುಭವಿಸಿಕೊಂಡು ಬರುತ್ತಿದ್ದರು. ಇವುಗಳ ಸಾಂಪ್ರದಾಯಿಕ ರೀತಿ ರಿವಾಜುಗಳನ್ನರಿಯದ ಬ್ರಿಟಿಷ್ ಸರ್ಕಾರ ಬಿಗಿಯಾದ ಅರಣ್ಯ ಕಾನೂನುಗಳ ಮೂಲಕ ಇವುಗಳಿಗೆ ತೊಡಕನ್ನುಂಟುಮಾಡಿತು. ನಂತರ ರೈತರು ನಡೆಸಿದ ಸುದೀರ್ಘ ಹೋರಾಟದ ಪರಿಣಾಮವಾಗಿ ಬ್ರಿಟಿಷ್ ಸರ್ಕಾರ ಈ ಸವಲತ್ತುಗಳಿಗೆ ಕಾನೂನಿನ ಮಾನ್ಯತೆ ನೀಡಿತು. (ಭಾರತೀಯ ಅರಣ್ಯ ಕಾನೂನು 1927 ಸೆ. 29 ರಿಂದ 34 ಹಾಗೂ ಬಾಂಬೇ ಅರಣ್ಯ ನಿಯಮಗಳು 1942 ನಿಯಮ 41 ರಿಂದ 45) ಸ್ವಾತಂತ್ರ್ಯಾ ನಂತರ ಅಂದಿನ ಮೈಸೂರು ಸರಕಾರವೂ ಸಹ ಸವಲತ್ತುಗಳನ್ನು ಮುಂದುವರಿಸಿ ಕೊಂಡು ಬಂದಿತಲ್ಲದೇ 1976ರ ಫೆಬ್ರುವರಿಯಲ್ಲಿ ಇದಕ್ಕಾಗಿ ಸರಕಾರಿ ಆದೇಶವನ್ನು ಹೊರಡಿಸಿ ಉತ್ತರ ಕನ್ನಡವನ್ನೊಳಗೊಂಡು ವಿವಿಧ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಬೆಟ್ಟ. ಕುಮ್ಕಿ. ಹಾಡಿ. ಬಾನೆ. ಗೋಮಾಳ ಮುಂತಾದ ಅರಣ್ಯ ಭೂಮಿಗಳ ಸವಲತ್ತುಗಳಿಗೆ ಮಾನ್ಯತೆ ನೀಡಲಾಯಿತು. ಹಾಗೂ ಇವುಗಳನ್ನೆಲ್ಲ ಸೇರಿಸಿ ಕರ್ನಾಟಕ ಅರಣ್ಯ ಕೈಪಿಡಿಯಲ್ಲಿ ಪ್ರಕಟಿಸಲಾಯಿತು. (ಸರಕಾರಿ ಆದೇಶ ನಂ. ಎ.ಎಫ್.ಡಿ 181-ಎಫ್.ಎ.ಡಿ-69 ದಿ. 13 ಫೆಬ್ರುವರಿ 1976) ಹಾಗೆಯೇ ಶಿವಮೊಗ್ಗ ಜಿಲ್ಲೆಯಲ್ಲಿ ಕಂದಾಯ ಅರಣ್ಯ ಭೂಮಿಯಾಗಿ ಸೊಪ್ಪಿನ ಬೆಟ್ಟ ಸವಲತ್ತುಗಳನ್ನು ಮುಂದುವರಿಸಲಾಯಿತು. (ಕರ್ನಾಟಕ ಭೂ ಕಂದಾಯ ಕಾನೂನು 1964ರ ಸೆ. 79(2))

ಉತ್ತರ ಕನ್ನಡ ಜಿಲ್ಲೆಯ ಒಟ್ಟು ವಿಸ್ತೀರ್ಣ 10224.85 ಚ.ಕಿ.ಮೀ. ಗಳಾಗಿದ್ದು ಈ ಪೈಕಿ ಅರಣ್ಯ ಜಮೀನಿನ ವಿಸ್ತಾರ 8290.0425 ಚ.ಕಿ.ಮೀ. ಗಳಾಗಿವೆ. ಇವುಗಳ ವಿಂಗಡನೆ ಈ ರೀತಿಯಾಗಿದೆ. ( 31-03-2000ರಲ್ಲಿದ್ದಂತೆ)

| | | |
|---|---|---|
| 1. ಕಾದಿಟ್ಟ ಅರಣ್ಯ<br>ಪ್ರಾಪರ್ ಅರಣ್ಯ<br>ಕಿರು ಅರಣ್ಯ | 6202.389 ಚ.ಕಿ.ಮೀ<br>1519.014 ಚ.ಕಿ.ಮೀ. | 7721.403 ಚ.ಕಿ.ಮೀ |
| 2. ಸಂರಕ್ಷಿತ ಅರಣ್ಯ<br>ಹಕ್ಕಲು<br>ಬೆಟ್ಟಗಳು | 32.156 ಚ.ಕಿ.ಮೀ<br>510.4855 ಚ.ಕಿ.ಮೀ. | 542.6415 ಚ.ಕಿ.ಮೀ. |
| 3. ಗ್ರಾಮ & ಇತರೆ<br>ಅರಣ್ಯ | | 25.998 ಚ.ಕಿ.ಮೀ. |

ಶಿರಸಿ ಅರಣ್ಯ ವಿಭಾಗದಲ್ಲಿ 40,668.8 ಹೆ. ಸೊಪ್ಪಿನ ಬೆಟ್ಟ ಪ್ರದೇಶವಿದ್ದು ಯಲ್ಲಾಪುರ ವಿಭಾಗದಲ್ಲಿ 7801.72 ಹೆ.,ಕಾರವಾರ ವಿಭಾಗದಲ್ಲಿ 852.94 ಹೆ., ಹಳಿಯಾಳ ವಿಭಾಗದಲ್ಲಿ 10.2 ಹೆ., ದಾಂಡೇಲಿ ವಿಭಾಗದಲ್ಲಿ 599.03 ಹೆ., ಹಾಗೂ ಹೊನ್ನಾವರ ವಿಭಾಗದಲ್ಲಿ 1115.83 ಹೆ. ಬೆಟ್ಟಗಳಿವೆ.

**ಸೊಪ್ಪಿನ ಬೆಟ್ಟ ಸೌಲಭ್ಯಗಳು**

**(ಸರಕಾರಿ ಆದೇಶ ನಂ. ಎ.ಎಫ್.ಡಿ 181–ಎಫ್.ಎ.ಡಿ–69 ದಿ. 13 ಫೆಬ್ರುವರಿ 1976): ಅಧ್ಯಾಯ 10–**

**ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಸವಲತ್ತುಗಳು.**

**131.ಎಫ್.**

**ತೋಟಗಾರರಿಗೆ "ಬೆಟ್ಟ" ಎಂದು ವಹಿಸಿಕೊಟ್ಟ ಸಂರಕ್ಷಿತ ಅರಣ್ಯಗಳಲ್ಲಿ ನೀಡಲಾದ ಸೌಲಭ್ಯಗಳು**

i) **ವ್ಯಾಖ್ಯೆಗಳು:** ಈ ನಿಯಮಗಳ ಉದ್ದೇಶಕ್ಕಾಗಿ "ತೋಟಿಗ" ಶಬ್ದದ ಅರ್ಥ ಮಾಲಿಕನಾಗಿಯಾಗಲಿ ಅಥವಾ ಗೇಣಿದಾರನಾಗಿಯಾಗಲಿ ಸಾಂಬಾರು ತೋಟದ (Spice Garden) ಪ್ರತ್ಯಕ್ಷ ಒಡೆತನ ಹೊಂದಿರುವವ ಮತ್ತು "ತೋಟ" ಎಂದರೆ ಸಾಂಬಾರು ಬೆಳೆಗಳ ತೋಟ.

ii) ತೋಟಿಗರು ತಾವು ತೋಟಿಗರಾಗಿರುವ ತೋಟ ಅಥವಾ ತೋಟಗಳ ಸಮೂಹಕ್ಕೆ ಬೆಟ್ಟ ಎಂದು ಬಿಡಲ್ಪಟ್ಟ ಸಂರಕ್ಷಿತ

ಅರಣ್ಯಗಳಲ್ಲಿ ಈ ಕೆಳಗಿನ ಸೌಲಭ್ಯಗಳನ್ನು ಬಳಸಿಕೊಳ್ಳಬಹುದು.

1. ಅವರು ತಮ್ಮ ಸ್ವಂತ ದನ-ಕರುಗಳನ್ನು ಮೇಯಿಸಬಹುದು.
2. ತಮ್ಮ ಸ್ವಂತ ಉಪಯೋಗಕ್ಕಾಗಿ ಹುಲ್ಲನ್ನು ಕಡಿದುಕೊಳ್ಳಬಹುದು.
3. ಅವರು ಮನೆಗಳನ್ನು ಮತ್ತು ಕೊಟ್ಟಿಗೆಗಳನ್ನು ಏರ್ಪಡಿಸಿಕೊಳ್ಳಬಹುದು. ಬಾವಿಗಳನ್ನು ತೋಡಿಕೊಳ್ಳಬಹುದು. ನೀರು ಕಾಲುವೆಗಳನ್ನು ಅಗೆದುಕೊಳ್ಳಬಹುದು. ಕಾಲುದಾರಿಗಳನ್ನು ರಚಿಸಿಕೊಳ್ಳಬಹುದು. ಒಕ್ಕುವ ಕಣಗಳನ್ನು ರಚಿಸಿಕೊಳ್ಳಬಹುದು. ಅಥವಾ ಕಬ್ಬಿನ ಗಾಣಗಳನ್ನು ಸ್ಥಾಪಿಸಿಕೊಳ್ಳಬಹುದು. ಹುಲ್ಲು. ಬಿಳಿಹುಲ್ಲು. ಧಾನ್ಯ. ಅಡಿಕೆ ಅಥವಾ ಗೊಬ್ಬರ ಮುಂತಾದುವುಗಳನ್ನು ಸಂಗ್ರಹಿಸಬಹುದು. ಅಥವಾ ಸಸಿಮಡಿಗಳಲ್ಲಿ ಸಸಿಗಳನ್ನು ಬೆಳೆಸಬಹುದು. ಅಥವಾ ಯಾವ ತೋಟಗಳಗಾಗಿ ಅವು ಬಿಡಲ್ಪಟ್ಟಿವೆಯೋ ಅಂಥವುಗಳ ಉತ್ತಮ ಬೇಸಾಯಕ್ಕಾಗಿ ಇತರ ಯಾವುದೇ ಸುಧಾರಣೆಗಳನ್ನು ಮಾಡಬಹುದು. ಅಥವಾ ಹಿಂದೆ ಹೇಳಿದ ಉದ್ದೇಶಗಳ ಅನುಕೂಲಕರ ಬಳಕೆಗಾಗಿ ಯಾವುದೇ ಸುಧಾರಣೆಗಳನ್ನು ಮಾಡಬಹುದು. ಆದರೆ ಎಲ್ಲವೂ ಈ ಮುಂದೆ ನಮೂದಿಸಲ್ಪಟ್ಟ ನಿಬಂಧನೆಗೊಳಪಟ್ಟಿರಬೇಕು.
4. ಅವರು ಕಳ-ಬೆಳೆಗಳನ್ನು ಮತ್ತು ಚದರಂಗಿ ಪೊದೆಗಳನ್ನು. ಕಾಯ್ದಿಟ್ಟ ಅರಣ್ಯಗಳಿಗೆ ಬೆಂಕಿಯು ಹಬ್ಬದಂತೆ ತಡೆಗಟ್ಟಲು ಸಾಕಷ್ಟು ಲಕ್ಷ್ಯವಹಿಸಿ ಸುಡಬಹುದು.
5. ಉತ್ಪಾದನೆ. ಮಾರಾಟ ಅಥವಾ ಪದಾರ್ಥ ಬದಲಾವಣೆ ಮಾಡುವುದು ಇವುಗಳನ್ನು ಹೊರತುಪಡಿಸಿ ತಮ್ಮ ಸ್ವಂತ ವಿಶ್ವಾಸಾರ್ಹ ಉಪಯೋಗಕ್ಕಾಗಿ ಮಣ್ಣು. ನೆಲ ಮತ್ತು ಕಲ್ಲುಗಳನ್ನು ಅವರು ತೆಗೆದು ಕೊಳ್ಳಬಹುದು.
6. ಈ ಮುಂದೆ ನಮೂದಿಸಲ್ಪಟ್ಟ ನಿಬಂಧನೆಗಳಗೊಳಪಟ್ಟು ಅವರು ಕಾಳುಮೆಣಸು ಮತ್ತು ಅಡಿಕೆ ಬೇಸಾಯ ಮಾಡಲು ಈ ಸ್ಥಳಗಳನ್ನು ಉಪಯೋಗಿಸಬಹುದು.
7. ಉತ್ಪಾದನೆ. ಮಾರಾಟ ಅಥವಾ ಪದಾರ್ಥ ಬದಲಾವಣೆ ಮಾಡುವುದು ಇವುಗಳನ್ನು ಹೊರತುಪಡಿಸಿ ಪ್ರಸ್ತುತ ಬೆಟ್ಟದಲ್ಲಿಯಾವುದೇ ಅರಣ್ಯ ಉತ್ಪಾದನೆಯನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ತೆಗೆದುಕೊಳ್ಳಬಹುದು. ಅವರು-

(i) ವಿಭಾಗೀಯ ಅರಣ್ಯಾಧಿಕಾರಿಯ ಪರವಾನಿಗೆಯ ಹೊರತಾಗಿ ಸಾಗವಾನಿ. ಶ್ರೀಗಂಧ. ಬೀಟೆ. ಎಬನಿ ಮತ್ತು ಹಾಲ್ಮಡ್ಡಿ ಮರಗಳನ್ನು ಅಥವಾ ಸಸಿಗಳನ್ನು ಯಾವುದೇ ರೀತಿ ಘಾಸಿಗೊಳಿಸಬಾರದು. ಅಥವಾ ಅವುಗಳ ಟೊಂಗೆಗಳನ್ನು ಕಡಿಯಬಾರದು. ಮತ್ತು

(ii) ವಿಭಾಗೀಯ ಅರಣ್ಯಾಧಿಕಾರಿಯ ಪೂರ್ವಾನುಮತಿ ಇಲ್ಲದೆ ಮುಂದೆ ಜೋಡಿಸಿದ ವಿವರಣಾ ಪಟ್ಟಿಯಲ್ಲಿರುವ ಜಾತಿಗಳ ಜೀವಂತ ಮರಗಳನ್ನು ಕಡಿಯಬಾರದು.

**iii**) ವಿಶ್ವಾಸಾರ್ಹ ಕೃಷಿ ಉದ್ದೇಶಿತ ತನ್ನ ಸ್ವಂತ ಉಪಯೋಗಕ್ಕಾಗಿ ಅಥವಾ ಯಾವ ತೋಟಕ್ಕಾಗಿ ಬೆಟ್ಟವು ಬಿಡಲ್ಪಟ್ಟಿದೆಯೋ ಅದರಲ್ಲಿ ಅಥವಾ ಅದರ ಪಕ್ಕದಲ್ಲಿರುವ ತನ್ನ ಮನೆಯ ದುರಸ್ತಿ ಅಥವಾ ನಿರ್ಮಾಣಕ್ಕಾಗಿ ಪುರವಣಿ ಪಟ್ಟಿಯಲ್ಲಿ ನಮೂದಿಸಿದ ಜಾತಿಗಳ ಯಾವುದೇ ಗಿಡವನ್ನು ತೋಟಿಗನು ಅಪೇಕ್ಷಿಸಿದಲ್ಲಿ ವಿಭಾಗೀಯ ಅರಣ್ಯಾಧಿಕಾರಿಗೆ ಲಿಖಿತ ಮನವಿ ಮಾಡಿಕೊಳ್ಳಬೇಕು. ಬೇಡಿಕೆಯು ಸಕಾರಣವೆಂದು ಅವನು ಸಮಾಧಾನಗೊಂಡಲ್ಲಿ. ಕಾಲಕಾಲಕ್ಕೆ ಸರಕಾರದಿಂದ ನಿರ್ಧರಿಸಲ್ಪಟ್ಟ ರಾಜಧನವನ್ನು ಪಾವತಿ ಮಾಡಿದ ನಂತರ ಅಪೇಕ್ಷಿತ ಮರಗಳನ್ನು ಕಡಿದು ಸಾಗಿಸಲು ಪರವಾನಿಗೆ ಯನ್ನು ಮಂಜೂರ ಮಾಡಬಹುದು.

**ಟಿಪ್ಪಣಿ:** ಪ್ರತಿ ವರ್ಷ 1ನೇ ಜೂನ ಮತ್ತು 30 ನೇ ಸೆಪ್ಟೆಂಬರ್ ನಡುವೆ. ಬೆಟ್ಟದಲ್ಲಿ ಮರಗಳನ್ನು ಕಡಿಯಲು ಮಂಜೂರಿ ಕುರಿತಾದ ಇಂಥ ಅರ್ಜಿಗಳನ್ನು ವಿಭಾಗೀಯ ಅರಣ್ಯಾಧಿಕಾರಿಯು ಸಾಮಾನ್ಯವಾಗಿ ಅವಲೋಕಿಸುವರು.

**iv**) ಬೆಟ್ಟವು ನೀಡಲ್ಪಟ್ಟ ತೋಟದ ಅಥವಾ ತೋಟಗಳ ಗುಂಪಿನ ತೋಟಿಗನು ವಿಭಾಗೀಯ ಅರಣ್ಯಾಧಿಕಾರಿಯ ಲಿಖಿತ ಪೂರ್ವಾನು ಮತಿಯ ಮೇರೆಗೆ. ಒಂದುವೇಳೆ ಅಂಥ ಮರಗಳು—

ಅ) ಬೆಳೆಸಿದ ಬೆಳೆಗಳ ನಡುವೆ ಬಂದರೆ

ಆ) ಯಾವುದೇ ನೀರಿನ ಗತಿಗೆ ಅಡ್ಡಿಪಡಿಸಿದರೆ.

ಇ) ಕಟ್ಟಡದ ಮೇಲೆ ತೂಗಾಡಿದರೆ ಅಥವಾ

ಈ) ವಹಿಸಿಕೊಟ್ಟ ಬೆಟ್ಟದ ಮುಖಾಂತರ ಹಾದುಹೋಗುವ ಯಾವುದೇ ಸಂಪರ್ಕ ರಸ್ತೆಯ ನಡುವೆ ಬಂದರೆ ರಾಜಧನವನ್ನು ನೀಡದೆ

ಪುರವಣಿ ಪಟ್ಟಿಯಲ್ಲಿ ನಮೂದಿಸಿದ ಮರಗಳನ್ನು ವಹಿಸಿಕೊಟ್ಟ ಬೆಟ್ಟದಲ್ಲಿ ಕಡಿಯಬಹುದು.

v) ದುರುಪಯೋಗಪಡಿಸಿಕೊಂಡಾಗ ಸೌಲಭ್ಯಗಳನ್ನು ತಡೆಹಿಡಿಯುವಿಕೆ - ಇಂಥ ಸೌಲಭ್ಯಗಳ ತಡೆಹಿಡಿಯುವಿಕೆಯು ನ್ಯಾಯವಾದದ್ದೆಂದು ತೋರಿಸುವಷ್ಟರಮಟ್ಟಿಗೆ ಮೇಲೆ ಕೊಡ ಮಾಡಿದ ಸೌಲಭ್ಯಗಳು ದುರುಪಯೋಗವಾಗಿವೆ ಅಥವಾ ದುರುಪ ಯೋಗವಾಗುತ್ತಿವೆ ಎಂದು ಜಿಲ್ಲಾಧಿಕಾರಿಯು ಅಭಿಪ್ರಾಯಪಟ್ಟಾಗ. ವಿಭಾಗೀಯ ಆಯುಕ್ತರ ಸಾರ್ವತ್ರಿಕ ಅಧಿಕಾರಕ್ಕೊಳಪಟ್ಟು. ಒಂದು ತೋಟದ ಅಥವಾ ತೋಟಗಳ ಗುಂಪಿನ ಯಾವುದೇ ಅಥವಾ ಎಲ್ಲ ತೋಟಿಗರಿಂದ ಅಥವಾ ಅವರ ಸೇವಕರಿಂದ. ಎಲ್ಲ ಅಥವಾ ಯಾವುದೇ ಪ್ರಸ್ತುತ ಸವಲತ್ತುಗಳ ಬಳಕೆಯನ್ನು ತಡೆ ಹಿಡಿಯಬಹುದು. ಅಥವಾ ಅವನಿಗೆ ಯೋಗ್ಯವೆಂದು ಕಂಡಬಂದ ಶುಲ್ಕವನ್ನು ಪಡೆದು ಅವರ ಬಳಕೆಗೆ ಅನುಮತಿ ನೀಡಬಹುದು.

vi) ಬೆಟ್ಟಗಳಲ್ಲಿಯ ಕಾಯ್ದಿರಿಸಿದ ಮರಗಳನ್ನು ಸಂರಕ್ಷಿಸಿಡಲು ಮತ್ತು ಅವುಗಳಗಾದ ಯಾವುದೇ ನಷ್ಟ ಅಥವಾ ಕೆಡಕನ್ನು ವರದಿ ಮಾಡಲು ತೋಟಿಗರು ಬಾಧ್ಯಸ್ಥರಾಗಿರುತ್ತಾರೆ. ಅವನು ತೋಟಿಗ ನಾಗಿರುವ ತೋಟ ಅಥವಾ ತೋಟಗಳ ಸಮೂಹಕ್ಕೆ ಬೆಟ್ಟ ಎಂದು ವಹಿಸಿಕೊಡಲ್ಪಟ್ಟ ರಕ್ಷಿತ ಅರಣ್ಯದಲ್ಲಿ ಬೆಳೆಯುತ್ತಿರುವ ಎಲ್ಲ ಸಾಗವಾನಿ. ಶ್ರೀಗಂಧ. ಎಬನಿ. ಬೀಟೆ ಮತ್ತು ಹಾಲ್ಮಡ್ಡಿ ಗಿಡಗಳನ್ನು ಮತ್ತು ಸಸಿಗಳನ್ನು ಇಂಥ ಪ್ರತಿಯೊಬ್ಬ ತೋಟಿಗನೂ ಕಾಪಾಡ ಬೇಕು. ಯಾವುದೇ ರೀತಿಯ ಯಾವುದೇ ಕಾರಣದಿಂದ ಇಂಥ ಯಾವುದೇ ಮರ ಅಥವಾ ಸಸಿಗಳಿಗೆ ಆಗುವ ಯಾವುದೇ ಹಾನಿ ಅಥವಾ ಕೆಡಕನ್ನು ಸಮೀಪದ ಅರಣ್ಯಾಧಿಕಾರಿಗೆ ಕೂಡಲೇ ವರದಿ ಮಾಡಬೇಕು.

vii) ಬೆಟ್ಟಗಳಲ್ಲಿಯ ಮೀಸಲಿಟ್ಟ ಮರಗಳನ್ನು ಕಡಿಯಲು ತೋಟಿಗರು ಅನುಮತಿ ನೀಡಬಾರದು. ಅಥವಾ ಕಡಿಯುವ ದುಷ್ಕಾರ್ಯಕ್ಕೆ ನೆರವಾಗಬಾರದು. ಇಂಥ ತೋಟಿಗನು ತಿಳುವಳಿಕೆಪೂರ್ವಕ ಅಥವಾ ಬುದ್ಧ್ಯಾಪೂರ್ವಕ ಯಾವುದೇ ಇಂಥ ಗಿಡ ಅಥವಾ ಸಸಿ ಯನ್ನು ಕಡಿಯಲು ಟೊಂಗೆಗಳನ್ನು ಕಡಿಯಲು. ನೋವನ್ನುಂಟು

ಮಾಡಲು ಅಥವಾ ಸಾಗಿಸಲು ಯಾವುದೇ ಇತರೇ ವ್ಯಕ್ತಿಗೆ ಅನುಮತಿ ನೀಡಬಾರದು ಅಥವಾ ದುಷ್ಕಾರ್ಯಕ್ಕೆ ನೆರವಾಗ ಬಾರದು.

**viii) ಬೆಟ್ಟಗಳಲ್ಲಿ ವಾಸ್ತವ್ಯದ ಮನೆಗಳ ನಿರ್ಮಾಣ:**

ಅ) ಕೃಷಿಗೆ ಸಂಬಂಧಿಸಿದ ಉದ್ದೇಶಗಳಗಲ್ಲದೆ ಬೆಟ್ಟದಲ್ಲಿ ವಾಸ್ತವ್ಯದ ಮನೆಯನ್ನು ಕಟ್ಟಲು ಅಥವಾ ಬೆಟ್ಟವನ್ನಾಗಲಿ. ಬೆಟ್ಟದ ಯಾವುದೇ ಭಾಗವನ್ನಾಗಲೀ ಉಪಯೋಗಿಸಲು ಯಾವುದೇ ತೋಟಿಗನು ಬಯಸಿದಲ್ಲಿ ಅವನು ಜಿಲ್ಲಾಧಿಕಾರಿಯ ಪೂರ್ವಾನುಮತಿಯನ್ನು ಪಡೆದುಕೊಳ್ಳಬೇಕು. ಇಂಥ ಪರವಾನಿಗೆಗಳ ಬಗ್ಗೆ ಅರ್ಜಿಯು ಜಿಲ್ಲಾಧಿಕಾರಿಯಿಂದ ಒಪ್ಪಿಕೊಳ್ಳಲ್ಪಟ್ಟಿರಬೇಕು. ಅವನು ಯೋಗ್ಯ ವಿಚಾರಣೆಯ ನಂತರ ಪರವಾನಿಗೆ ಅರ್ಜಿಯನ್ನು ಮಂಜೂರು ಮಾಡಬಹುದು ಅಥವಾ ನಿರಾಕರಿಸಬಹುದು.

ಬ) ಪ್ರತಿ ಸಂದರ್ಭದಲ್ಲಿಯೂ ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗಿಸಲ್ಪಡುವ. ಪರವಾನಿಗೆ ನೀಡಿದ ಕ್ಷೇತ್ರವು 10 ಎಕರೆಗಳನ್ನು ಮೀರಬಾರದು.

ಕ) ಮೇಲೆ ನಮೂದಿಸಿದ ಉದ್ದೇಶಕ್ಕಾಗಿ ಬಳಸಲ್ಪಡುವ ಪರವಾನಿಗೆ ನೀಡಿದ ಕ್ಷೇತ್ರದ ಬದಲಾಗಿ ಹೆಚ್ಚಿಗೆ ಬೆಟ್ಟ ವ ಭೂಮಿ ಪಡೆಯಲು ತೋಟಿಗನು ಅರ್ಹನಲ್ಲ.

ಡ) ಮೇಲಿನಂತೆ ಕೃಷಿಯೇತರ ಉದ್ದೇಶಗಳ ಬಳಕೆಗಾಗಿ ಯಾವುದೇ ಭೂಮಿಯು ಹೀಗೆ ಪರವಾನಿಗೆ ನೀಡಲ್ಪಟ್ಟಲ್ಲಿ ಸರಕಾರಿ ಆಜ್ಞೆಗೊಳಪಟ್ಟು ಜಿಲ್ಲಾಧಿಕಾರಿಯು ಆ ಸ್ಥಳವನ್ನು ಖುಲ್ಲಾಪಡಿಸಬಹುದು. ಮತ್ತು ಭೂ ತೆರಿಗೆ ಕಾಯ್ದೆ ಮತ್ತು ಭೂ ತೆರಿಗೆ ನಿಯುಮಾವಳಿಗೊಳಪಟ್ಟು ವಿಧಿಸಬಹುದಾದ ಹೊಸ ಕಂದಾಯದ ಜೊತೆಗೆ ಬದಲಾವಣೆ ದಂಡವನ್ನು ವಸೂಲಿ ಮಾಡಿ ಆ ಸ್ಥಳವನ್ನು ಮಂಜೂರ ಮಾಡಬಹುದು.

**ix) ಬೆಟ್ಟ ಭೂಮಿಯು ಬೇಸಾಯ**–ಉಪನಿಯಮ **F(ii)** (6) ಕ್ಕೊಳಪಟ್ಟು ಬೆಟ್ಟ ಭೂಮಿಯಲ್ಲಿ ಬೇಸಾಯವು ಈ ಕೆಳಗಿನ ನಿಬಂಧನೆಗೊಳಪಟ್ಟಿದೆ-

ಅ) ಅಲ್ಲಿ ಯಾವುದೇ ತೋಟ ಬೆಳೆಸಿದ್ದರೆ ಅದರ ನಿರ್ವಹಣೆಗೆ ಅಥವಾ ಇಂಥ ಬೇಸಾಯಕ್ಕಾಗಿ ಉಪಯೋಗಿಸಿದ ಪ್ರದೇಶದ ಬದಲಾಗಿ

ಯಾವುದೇ ಹೆಚ್ಚಿನ ಬೆಟ್ಟ ಭೂಮಿಯು ಕೊಡಲಾಗುವುದಿಲ್ಲ.

ಬ) ಆ ರೀತಿ ಬೇಸಾಯ ಮಾಡಿದ ಭೂಮಿಯು 5 ಎಕರೆ ಅಥವಾ ಅದಕ್ಕಿಂತಲೂ ಕಡಿಮೆ ಇದ್ದರೆ ಮಾರ್ಪಾಟು ಬೆಲೆಯನ್ನು ತೆರದೆ ಅದರಲ್ಲಿ ಬೇಸಾಯ ಮಾಡಲು ತೋಟಿಗನು ಬಾಧ್ಯಸ್ಥನು. ಆದರೆ ಭೂ ತೆರಿಗೆ ನಿಯುಮಾವಳಿಗಳ ಪ್ರಕಾರ ನಿರ್ಧರಿಸಲ್ಪಡುವ ಕಂದಾಯವನ್ನು ಈ ಭೂಮಿಗಾಗಿ ಸರಕಾರಕ್ಕೆ ಕೊಡಬೇಕು. ಆದರೆ ಈ ರೀತಿ ಬೇಸಾಯ ಮಾಡಿದ ಭೂಮಿಯು 5 ಎಕರೆಗಳನ್ನು ಮೀರಿದಲ್ಲಿ. ಬೇಸಾಯಕ್ಕೆ ಪೂರ್ವದಲ್ಲಿ ಭೂಮಿಯು ಬೆಲೆಗೆ ಸಮನಾದ ಮಾರ್ಪಾಟು ಕಿಮ್ಮತ್ತು ವಿಧಿಸಲ್ಪಡಬೇಕು. ಇಂಥ ಸಂದರ್ಭಗಳಲ್ಲಿ ಮಾಪಾಟು ಬೆಲೆಯು ಕಂದಾಯ ಇಲಾಖೆಯಿಂದ ನಿರ್ಧರಿಸಲ್ಪಡಬೇಕು. ಆ ರೀತಿ ಬೇಸಾಯ ಮಾಡಿದ ಭೂಮಿಯನ್ನು ಖುಲ್ಲಾ ಪಡಿಸಿದ ನಂತರ ಭೂ ಮಂಜೂರಾತಿ ನಿಯಮಗಳ ಪ್ರಕಾರ ತೋಟಿಗನಿಗೆ ಮಂಜೂರ ಮಾಡತಕ್ಕದ್ದು.

**x) ಬೆಟ್ಟ ಪ್ರದೇಶಗಳ ಕೊರತೆ ತುಂಬಿಕೊಳ್ಳಲು ತತ್ವಗಳು:**

ಅ) ಘಟ್ಟದ ಮೇಲಿನ ತಾಲೂಕುಗಳಲ್ಲಿ ಬೆಟ್ಟ ಪ್ರದೇಶಗಳು ಅವಶ್ಯಕ ಪ್ರಮಾಣಕ್ಕಿಂತಲೂ ಕಡಿಮೆ ಇದ್ದಲ್ಲಿ (ಮೇಲಿನ **ix**ನೇ ಕಲಮಿಗೆ ಹೊರತುಪಡಿಸಿ) ಮತ್ತು ರಕ್ಷಿತ ಅರಣ್ಯದಲ್ಲಿ ಯೋಗ್ಯ ಭೂಮಿ ಲಭ್ಯವಿದ್ದರೆ ಪ್ರತಿಯೊಂದು ಹೆಕ್ಟೇರು ತೋಟಕ್ಕೆ 8 ಹೆಕ್ಟೇರು ಬೆಟ್ಟ ಬರುವಂತೆ ಕೊರತೆ ತುಂಬಿಕೊಳ್ಳಬಹುದು.

ಬ) ಘಟ್ಟದ ಕೆಳಗಿನ ತಾಲೂಕುಗಳಲ್ಲಿ (ಮೇಲಿನ **ix** ನೇ ಕಲಮಿಗೆ ಹೊರತುಪಡಿಸಿ) ರಕ್ಷಿತ ಅರಣ್ಯಗಳಲ್ಲಿ ಯೋಗ್ಯ ಭೂಮಿ ಲಭ್ಯವಿಲ್ಲದ ಕಾರಣ ಹೆಚ್ಚಿನ ಬೆಟ್ಟವನ್ನು ನೀಡಲು ಸಾಧ್ಯವಿಲ್ಲ. ಆದರೂ ಎಲ್ಲೆಲ್ಲಿ ಯೋಗ್ಯ ಅರಣ್ಯ ಭೂಮಿಗಳು ದೊರೆಯುತ್ತವೆಯೋ ಅಂಥವು ಗಳನ್ನು ಅಡಿಕೆ ತೋಟಗಳಿಗೆ ಬೆಟ್ಟ ಎಂದು ವಹಿಸಿಕೊಡಬೇಕು.

**xi) ಬೆಟ್ಟ ಪ್ರದೇಶ ನಿರ್ವಹಣೆ:**

ಅ) ಸಾಧ್ಯವಾದಷ್ಟು ಕಡಿಮೆ ಕ್ಷೇತ್ರದಿಂದ ಅವಶ್ಯಕ ಹಸಿರು ಗೊಬ್ಬರವನ್ನು ಪಡೆದುಕೊಳ್ಳುವಂತೆ ಅರಣ್ಯ ಮತ್ತು ಕೃಷಿ ಇಲಾಖೆಗಳೆರಡೂ ಬೆಟ್ಟಗಳ ನಿರ್ವಹಣೆಯ ಉತ್ತಮ ಪದ್ಧತಿ ಹಾಗೂ ಸೊಪ್ಪು ಕಡಿಯುವುದು ಇವುಗಳ ಬಗ್ಗೆ ತೋಟಿಗರಿಗೆ ತಿಳುವಳಿಕೆ ನೀಡಬೇಕು.

ಬ) ತೋಟಿಗರಿಗೆ ಅನುಭವಿಸಲು ಅನುಮತಿ ನೀಡಲ್ಪಟ್ಟ ಧಾರಾಳ ರಿಯಾಯತಿಗಳ ದೃಷ್ಟಿಯಲ್ಲಿ ಬೆಟ್ಟಗಳನ್ನು ಸರಿಯಾಗಿ ನಿರ್ವಹಿಸುವಲ್ಲಿ ಅವರ ಹೆಚ್ಚಿನ ಜವಾಬ್ದಾರಿಯ ಕುರಿತಾಗಿ ಅವರು ಮನಗಾಣುವಂತೆ ಮಾಡಬೇಕು.

ಕ) ಬೆಟ್ಟದಲ್ಲಿ ಸಮನಾದ ಅಂತರದಲ್ಲಿರುವಂತೆ ಪ್ರತಿ ಹೆಕ್ಟೇರಿಗೆ ಕನಿಷ್ಠ 100 ಮರಗಳು ಇರಬೇಕು. ಅವುಗಳಲ್ಲಿ ಕನಿಷ್ಠ 50 ಮರಗಳು ಎದೆಯ ಮಟ್ಟದ ಎತ್ತರದಲ್ಲಿ 30 ರಿಂದ 45 ಸೆಂಟಿಮೀಟರ ವ್ಯಾಸಕ್ಕೆ ಕಡಿಮೆ ಇಲ್ಲಷ್ಟು ಅಳತೆಯ ಕಾಯ್ದಿಟ್ಟ ಜಾತಿಯವು ಗಳಾಗಿರಬೇಕು.

ಡ) ಪ್ರತಿ ಹೆಕ್ಟೇರಿಗೆ ಮರಗಳ ಸಂಖ್ಯೆಯು 100 ಕ್ಕಿಂತಲೂ ಕಡಿಮೆ ಇದ್ದಲ್ಲಿ, ಮೇಲೆ ಗೊತ್ತುಪಡಿಸಿದಂತೆ ಅವಶ್ಯಕ ಸಂಖ್ಯೆಯ ಕಾಯ್ದಿಟ್ಟ ಮತ್ತು ಇತರ ಮರಗಳನ್ನು ಭರ್ತಿ ಮಾಡಲು ಯೋಗ್ಯ ಜಾತಿಯ ಸಾಕಷ್ಟು ಗಿಡಗಳನ್ನು ತೋಟಿಗರು ತನ್ನ ಸ್ವಂತ ಖರ್ಚಿನಲ್ಲಿ ನೆಡಬೇಕು ಮತ್ತು ಎಬ್ಬಿಸಬೇಕು.

ಎ) ಒಂದು ವೇಳೆ 5 ವರ್ಷಗಳ ನಂತರ ಮೇಲ್ಕಾಣಿಸಿದ ಕನಿಷ್ಠ ಸಂಖ್ಯೆಯ ಮರಗಳನ್ನು ತೋಟಿಗನು ಬೆಳೆಸದಿದ್ದಲ್ಲಿ ಅವನು ಹೆಕ್ಟೇರಿಗೆ ರೂ.25/-ರಂತೆ ದಂಡ ತೆರಲು ಬಾಧ್ಯಸ್ಥನಾಗುತ್ತಾನೆ. ಮತ್ತು ಅರಣ್ಯ ಖಾತೆಯು ಆ ಕ್ಷೇತ್ರದಲ್ಲಿ ಅವಶ್ಯಕ ಸಂಖ್ಯೆಯ ಗಿಡಗಳನ್ನು ನೆಡಲು ಹಕ್ಕು ಪಡೆಯುತ್ತದೆ. ಗಿಡ ನೆಡುವ ವೆಚ್ಚವು ಪ್ರತಿ ಹೆಕ್ಟೇರಿಗೆ ರೂ. 125/-ಕ್ಕೇ ಸೀಮಿತವಾಗಿದ್ದು ಇದನ್ನು ತೋಟಿ ಗನು ಭರಿಸಬೇಕಾಗುತ್ತದೆ. ತನ್ನ ಸ್ವಂತ ಬಳಕೆಗೆ ಪುಕ್ಕಟೆಯಾಗಿ ಕಾಯ್ದಿಟ್ಟ ಮರಗಳನ್ನೊಳಗೊಂಡು ನೆಟ್ಟ ಗಿಡಗಳ 1/3ದಷ್ಟನ್ನು ಪಡೆಯಲು ತೋಟಿಗನು ಬಾಧ್ಯಸ್ಥನಾಗಿರುತ್ತಾನೆ. ಅಥವಾ ಸರ ಕಾರವು ಅವುಗಳನ್ನು ತೆಗೆದುಕೊಳ್ಳಲು ನಿರ್ಧರಿಸಿದರೆ ನಾಟಿನ ಕಿಮ್ಮತ್ತಿನ ಶೇಕಡಾ 30 ರಷ್ಟು ಮೌಲ್ಯವನ್ನು ಪಡೆಯಲು ಬಾಧ್ಯಸ್ಥನು.

ಫ) ಮೇಲಿನ (ಡ)ದಲ್ಲಿ ಉಲ್ಲೇಖಿಸಿದಂತೆ ಗಿಡಗಳನ್ನು ನೆಡುವ ಕೆಲಸ ವನ್ನು ಕೈಕೊಳ್ಳುವ ತೋಟಿಗರಿಗೆ ಅರಣ್ಯ ಇಲಾಖೆಯು ಅವಶ್ಯಕ ಸಂಖ್ಯೆಯ ಸಸಿ ಮತ್ತು ಗಿಡಗಳನ್ನು ವೆಚ್ಚ ಬೆಲೆಗೆ ಪೂರೈಸುವ ವ್ಯವಸ್ಥೆ ಮಾಡಬೇಕು.

xii) ಬೆಟ್ಟ ವಿಭಾಗಣಿ:

ಅ) ಬಹಳಷ್ಟು ಸಂದರ್ಭಗಳಲ್ಲಿ ತೋಟಿಗರು ಅವರ ಆಸ್ತಿಗಳಿಗೆ ಬಿಟ್ಟ ಬೆಟ್ಟಗಳಲ್ಲಿ ಸಾಮೂಹಿಕ ಹಕ್ಕುಗಳನ್ನು ಅನುಭವಿಸುತ್ತಾರೆ. ಇದರಿಂದ ಬೆಟ್ಟಗಳ ನಿರ್ವಹಣೆಯು ಅತೀವ ಅಲಕ್ಷಿಸಲ್ಪಟ್ಟಿದೆಯಲ್ಲದೆ ಆಸ್ತಿವಂತರ ನಡುವೆ ನಿರಂತರ ಮೊಕದ್ದಮೆ ಮತ್ತು ಜಗಳಗಳಿಗೆ ಅವಕಾಶ ಮಾಡಕೊಟ್ಟಿದೆ. ಇಂಥ ಸಂದರ್ಭಗಳಲಿ ವಹಿಸಿಕೊಟ್ಟ ಬೆಟ್ಟವನ್ನು ಸಾಮೀಪ್ಯ ಅಥವಾ ಪ್ರತಿನಿಧ್ಯಕ್ಕನುಸಾರವಾಗಿ ಸಾಧ್ಯವಾದಷ್ಟು ನಿರ್ದಿಷ್ಟ ಪ್ರಮಾಣದಂತೆ ವಿಭಾಗಿಸಿ ಕೊಡಬೇಕು.

ಬ) ಈ ಮುಂದೆ ಅವಕಾಶ ಕಲ್ಪಿಸಿದ ರೀತಿಯಲ್ಲಿ ಸಂಬಂಧಪಟ್ಟ ತೋಟಿಗರ ನಡುವೆ ಇಂಥ ಬೆಟ್ಟಗಳನ್ನು ವಿಭಾಗಿಸಿಕೊಡಲು ಉಪ-ವಿಭಾಗಾಧಿಕಾರಿಯು ಸಮರ್ಥನಾಗುವಂತೆ, ಈ ವಿಷಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯು ಪ್ರಕಟಪಡಿಸುವ ದಿನದಂದು ಸಂಬಂಧಪಟ್ಟ ಎಲ್ಲ ತೋಟಿಗರ ಸಾವಮೂಹಿಕ ಹಕ್ಕುಗಳು ಇಲ್ಲವಾಗುತ್ತವೆ.

ಕ) ಇನ್ನು ಮುಂದೆ ಬೆಟ್ಟ ವಿಭಾಗಣಾಧಿಕಾರಿ ಎಂದು ಕರೆಯಲ್ಪಡುವ ಉಪ-ವಿಭಾಗಾಧಿಕಾರಿಯು, i) ಇಂಥ ಪ್ರತಿಯೊಬ್ಬ ತೋಟಿಗನು ಸಾಗುವಳಿ ಮಾಡುವ ತೋಟದ ಕ್ಷೇತ್ರದ ವಿವರಣೆಗಳು, ii) ಪ್ರಕಟಿತ ದಿನದಂದು ಒಟ್ಟಿಗೆ ಅವರು ಮೋಜಣಿ ಸಂಖ್ಯೆ ಪ್ರಕಾರ ಹೊಂದಿದ ಬೆಟ್ಟದ ಒಟ್ಟೂ ಕ್ಷೇತ್ರ, iii) ಪರಸ್ಪರ ತಿಳುವಳಿಕೆಯಿಂದ ಇಂಥ ತೋಟಿಗರು ವಿಭಾಗಿಸಿಕೊಳ್ಳಲು ಒಪ್ಪಿದ್ದರೆ, ಅದರ ವಿವರಗಳು ಎಂದರೆ ಪ್ರತಿಯೊಬ್ಬನು ಹೊಂದಿದ ತೋಟದ ಮೋಜಣಿ ಸಂಖ್ಯೆ ಮತ್ತು ಅವರ ನಡುವೆ ವಿಭಾಗಿಸಿ ಕೊಳ್ಳಲು ಒಪ್ಪಿಕೊಂಡ ಬೆಟ್ಟದ ಕ್ಷೇತ್ರ ಇವುಗಳನ್ನು ತೋರಿಸುವ ಕರಡು ಪ್ರತಿ ಮತ್ತು iv) ಅವರು ಯಾವುದೇ ಇಂಥ ನಿರ್ಧಾರಕ್ಕೆ ಬರದಿದ್ದರೆ, ಪ್ರಕಟಿತ ದಿನದಂದು ಪ್ರತಿಯೊಬ್ಬ ತೋಟಿಗನು ಸಾಗುವಳಿ ಮಾಡುತ್ತಿದ್ದ ತೋಟದ ಮೋಜಣಿ ಸಂಖ್ಯೆ ಮತ್ತು ಬಳಸುತ್ತಿರುವ ಬೆಟ್ಟ ಇವುಗಳನ್ನು ತೋರಿಸುವ ಕರಡು ಪ್ರತಿ ಇವುಗಳ ಕುರಿತು ಮಾಹಿತಿಯನ್ನು ಪಡೆದುಕೊಳ್ಳಬೇಕು.

ಡ) ಆನಂತರ ಬೆಟ್ಟ ವಿಭಾಗಣಾಧಿಕಾರಿಯು, ತೋಟಿಗರ ಯಾವದೇ ಕರಾರು ಪತ್ರವಿದ್ದಲ್ಲಿ ಸಾಧ್ಯವಾದಷ್ಟು ಅದನ್ನು ಗಮನದಲ್ಲಿಟ್ಟುಕೊಂಡು

ನಿರ್ದಿಷ್ಟ ಪ್ರಮಾಣ (ಎಂದರೆ ಪ್ರತಿ ಹೆಕ್ಟೇರು ತೋಟಕ್ಕೆ 4 ಹೆಕ್ಟೇರು ಬೆಟ್ಟದಂತೆ) ದಲ್ಲಿ ತೋಟಿಗರ ನಡುವೆ ಬೆಟ್ಟವನ್ನು ವಿಭಾಗಿಸಿ ಕೊಡಬೇಕು.

ಇ) ಇಂಥ ವಿಭಾಗಣೆಗೆ ಸಂಬಂಧಿಸಿದಂತೆ ಬೆಟ್ಟಾ ವಿಭಾಗಣಾಧಿಕಾರಿಯ ನಿರ್ಣಯವೇ ಅಂತಿಮವಾದದ್ದು.

ಫ) ಮೇಲಿನ ಉಪನಿಯಮ (ಡ)ದ ಪ್ರಕಾರ ಯಾರಿಗೆ ಬೆಟ್ಟವು ವಹಿಸಿಕೊಡಲ್ಪಟ್ಟಿದೆಯೋ ಆ ತೋಟಿಗನು ಯಾವದಕ್ಕೆ ಬೆಟ್ಟ ಕೊಡಲ್ಪಟ್ಟಿದೆಯೋ ಆ ತೋಟಗಳ ಕುರಿತಾಗಿ ಮೇಲಿನ ಉಪನಿಯಮ F (ii)ದ ಪ್ರಕಾರ ಅವನಿಗೆ ನೀಡಲ್ಪಟ್ಟ ಸವಲತ್ತುಗಳನ್ನು ಅನುಭವಿಸಲು ಅರ್ಹನಾಗಿರುತ್ತಾನೆ.

ಗ) ಬೆಟ್ಟಾ ವಿಭಾಗಣಾಧಿಕಾರಿಯು ಬೆಟ್ಟವನ್ನು ವಿಭಾಗಣೆ ಮಾಡುವಲ್ಲಿ ಇಲಾಖೆಗೆ ತಗಲಿದ ವೆಚ್ಚವನ್ನು ತೋಟಿಗರು ಭರಿಸಬೇಕು. ತುಂಬಲು, ತಪ್ಪಿದಲ್ಲಿ ಭೂ ತೀರ್ವೆ ಬಾಕಿಯಂತೆ ಅದನ್ನು ವಸೂಲಿ ಮಾಡಲಾಗುವದು.

ಹ) ಮೇಲಿನಂತೆ ಬೆಟ್ಟಾ ವಿಭಾಗಣಾಧಿಕಾರಿಯಿಂದ ಜಾರಿಗೊಳಿಸಲ್ಪಟ್ಟ ಆದೇಶದ ಒಂದು ನಕಲನ್ನು ದಾಖಲೆಗಳಲ್ಲಿ ಅವಶ್ಯಕ ಬದಲಾವಣೆಗಳನ್ನು ಮಾಡಲು ಅರಣ್ಯ ನಿರ್ಧರಣಾಧಿಕಾರಿಗೆ ಕಳಿಸಿ ಕೊಡಬೇಕು.

ಐ) ಇನ್ನು ಮುಂದೆ, ನಿರ್ದಿಷ್ಟ ತೋಟಿಗನು ಸದ್ಯ ಪಡೆದಿರುವ ಸಾಂಬಾರು ತೋಟಗಳನ್ನು ಭಾಗಶ: ಅಥವಾ ಪೂರ್ಣವಾಗಿ, ಮಾರಾಟದ ಮೂಲಕ ಅಥವಾ ಕೌಟುಂಬಿಕ ಹಿಸೆಯಿಂದ, ಯಾವದೇ ಸಂದರ್ಭದಿಂದ ಬೇರೆಯವರಿಗೆ ಹಸ್ತಾಂತರ ಮಾಡಿದರೆ ಇಂಥ ಹಸ್ತಾಂತರವನ್ನು ಸಂಬಂಧಪಟ್ಟ ತೋಟಿಗರು ಜಿಲ್ಲಾದಿಕಾರಿಗೆ ಲಿಖಿತ ವರದಿ ಮಾಡಬೇಕು. ಅವನು ನಂತರ ಮೇಲಿನ ನಿಯಮಗಳಲ್ಲಿ ವಿಧಿಸಿದಂತೆ ಪ್ರಮಾಣಕ್ಕನುಗುಣವಾಗಿ ಉತ್ತರಾಧಿಕಾರಿ-ಕಬ್ಜೆದಾರರ ನಡುವೆ ಬೆಟ್ಟಗಳನ್ನು ಮುಂದೆ ವಿಭಾಗ ಮಾಡಲು ಕ್ರಮ ತೆಗೆದುಕೊಳ್ಳುವನು.

## ಭಾರತೀಯ ಅರಣ್ಯ (ಸಂರಕ್ಷಣಾ) ಕಾಯಿದೆ 1980ರ ಜಾರಿಯ ನಂತರದ ಸ್ಥಿತಿ

ಕೇಂದ್ರ ಸರಕಾರದ ಅರಣ್ಯ (ಸಂರಕ್ಷಣಾ) ಕಾಯಿದೆ 1980ರ ಜಾರಿಯು ನಂತರ ಸೊಪ್ಪಿನ ಬೆಟ್ಟಗಳ ಕೆಲವು ಸವಲತ್ತುಗಳು ಮೊಟಕುಗೊಳಸಲ್ಪಟ್ಟಿವೆ. ಈ ಕಾಯಿದೆಯ ಸೆಕ್ಷನ್ 2 ಈ ರೀತಿ ಹೇಳುತ್ತದೆ:

"ಯಾವುದೇ ರಾಜ್ಯದಲ್ಲಿ ಈಗಾಗಲೇ ಜಾರಿಯಲ್ಲಿರುವ ಯಾವುದೇ ಕಾಯಿದೆಯ ಹೊರತಾಗಿಯೂ ಯಾವುದೇ ರಾಜ್ಯ ಸರಕಾರ ಅಥವಾ ಇನ್ನಿತರ ಪ್ರಾಧಿಕಾರವು ಕೇಂದ್ರ ಸರಕಾರದ ಪೂರ್ವಾನುಮತಿಯಿಲ್ಲದೆ ಈ ಕೆಳಗಿನ ಸಲುವಾಗಿ ಯಾವುದೇ ಆದೇಶವನ್ನು ಹೊರಡಿಸುವಂತಿಲ್ಲ.

1. ಯಾವುದೇ ಅರಣ್ಯ ಭೂಮಿ ಅಥವಾ ಅದರ ಭಾಗವು ಅರಣ್ಯೇತರ ಉದ್ದೇಶಗಳಗಾಗಿ ಬಳಸಲ್ಪಡಲಿ ಎಂಬುದಾಗಿ.
2. ಯಾವುದೇ ಅರಣ್ಯ ಭೂಮಿ ಅಥವಾ ಅದರ ಭಾಗವು ಸರಕಾರದಿಂದ ನಿಯಂತ್ರಿಸಲ್ಪಡದ ಯಾವುದೇ ಖಾಸಗಿ ವ್ಯಕ್ತಿಗಳು ಪ್ರಾಧಿಕಾರ ಕಾರ್ಪೋರೇಶನ್ ಏಜನ್ಸಿ ಅಥವಾ ಸಂಘಗಳಿಗೆ ಗುತ್ತಿಗೆ ಅಥವಾ ಇನ್ನಿತರ ರೀತಿಯಲ್ಲಿ ವರ್ಗಾಯಿಸಲ್ಪಡಲಿ ಎಂಬುದಾಗಿ."

ಮೇಲಿನ ಕಾನೂನನ್ನು ಸೊಪ್ಪಿನ ಬೆಟ್ಟಗಳ ಸವಲತ್ತುಗಳಿಗೆ ಅನ್ವಯಿಸಿದಾಗ ಈ ಕೆಳಗಿನ ವಿಷಯಗಳು ಸ್ಪಷ್ಟವಾಗುತ್ತವೆ.

1. ಈಗಾಗಲೇ ಅಂದರೆ 1980ರ ಅರಣ್ಯ (ಸಂರಕ್ಷಣಾ) ಕಾಯಿದೆಯ ಜಾರಿಗೆ ಮೊದಲೇ ನೀಡಲ್ಪಟ್ಟ ಸವಲತ್ತುಗಳನ್ನು ಅನುಭವಿಸಲು ಯಾವುದೇ ಆತಂಕಗಳಿಲ್ಲ.
2. ಹೊಸದಾಗಿ ಯಾವುದೇ ಬೆಟ್ಟ ಸವಲತ್ತುಗಳನ್ನು ಕೇಂದ್ರ ಸರಕಾರದ ಪೂರ್ವಾನುಮತಿಯಿಲ್ಲದೆ ರಾಜ್ಯ ಸರಕಾರವು ಮಂಜೂರಿ ಮಾಡುವಂತಿಲ್ಲ.
3. ಮನೆ ಕಟ್ಟಲು ಹಾಗೂ ಹಣ್ಣು ಹಂಪಲುಗಳನ್ನು ಬೆಳೆಯಲು ಅನುಮತಿ ನೀಡಲು ಈ ಹಿಂದೆ ಜಿಲ್ಲಾಧಿಕಾರಿಗೆ ಇದ್ದ ಅಧಿಕಾರವನ್ನು ಮೊಟಕು ಗೊಳಿಸಲಾಗಿದೆ. ಇವೆರಡೂ ಅರಣ್ಯೇತರ ಉದ್ದೇಶಗಳಾದ್ದರಿಂದ ಕೇಂದ್ರ ಸರಕಾರದ ಪೂರ್ವಾನುಮತಿಯಿಲ್ಲದೆ ಈ

ಅಧಿಕಾರಗಳನ್ನು ಚಲಾಯಿಸುವಂತಿಲ್ಲ.

4. ಈ ಕಾಯಿದೆಯಲ್ಲಿ "ಅರಣ್ಯೇತರ ಉದ್ದೇಶಗಳಗಾಗಿ ಬಳಕೆ" ಎನ್ನುವ ಶಬ್ದ ಅರಣ್ಯ ಭೂಮಿಗೆ ಅನ್ವಯಿಸಿ ಬಳಸಲ್ಪಟ್ಟಿದೆಯೇ ಹೊರತು ಅರಣ್ಯ ಉತ್ಪನ್ನಗಳಿಗೆ ಅನ್ವಯಿಸಿ ಅಲ್ಲ. ಆದ್ದರಿಂದ ತೋಟದ ಬಳಕೆಗಾಗಿ ಸೊಪ್ಪು ಕಡಿಯುವದು ದರಕು ಸಂಗ್ರಹಿಸುವದೇ ಮುಂತಾದ ಕಾರ್ಯಗಳು ಈ ಕಾಯಿದೆಯಿಂದ ಅಬಾಧಿತವಾಗಿರುತ್ತವೆ

5. ಈ ಕಾಯಿದೆಯನ್ನು ರಾಜ್ಯ ಸರಕಾರದ ಆದೇಶಗಳಿಗೆ ಮಾತ್ರ ಅನ್ವಯಿಸಲಾಗಿದೆಯೇ ಹೊರತು ಸರಕಾರದ ಆದೇಶ ಯಾ ಪೂರ್ವಾನುಮತಿಯಿಲ್ಲದೇ ಅನುಭವಿಸಬಹುದಾದ ಸವಲತ್ತುಗಳಿಗೆ ಈ ಕಾಯಿದೆ ಅನ್ವಯಿಸುವದಿಲ್ಲ. ಜಿಲ್ಲಾಧಿಕಾರಿ ಈ ಕಾಯಿದೆಯಲ್ಲಿ ನಮೂದಿಸಿದ "ಇತರ ಪ್ರಾಧಿಕಾರ" ಎನ್ನುವ ಶಬ್ದದ ವ್ಯಾಪ್ತಿಯೊಳಗೆ ಬರುತ್ತಾರಾದ್ದರಿಂದ ಅವರು ನೀಡುವ ಆದೇಶಗಳಿಗೂ ಈ ಕಾಯಿದೆ ಅನ್ವಯಿಸುತ್ತದೆ.

ಇದೀಗ ಹೊಸದಾಗಿ ಜಾರಿಗೆ ಬಂದ ಭಾರತ ಸರಕಾರದ "ಬುಡಕಟ್ಟು ಜನಾಂಗಗಳ ಹಾಗೂ ಇತರೆ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಕಾನೂನು 2006ರ ಅಡಿಯಲ್ಲಿ ಸೆ. 2(ಓ)ರ ವ್ಯಾಪ್ತಿಗೆ ಮೂರು ತಲೆಮಾರು ಅಥವಾ ಎಪ್ಪತ್ತೈದು ವರ್ಷಗಳಿಂದ ಸೊಪ್ಪಿನ ಬೆಟ್ಟಗಳ ಸವಲತ್ತುಗಳನ್ನು ಅನುಭವಿಸಿಕೊಂಡು ಬರುತ್ತಿರುವ ಬೆಟ್ಟ ವಹಿವಾಟದಾರರು ಬರುತ್ತಿದ್ದು, ಅದರಂತೆ ಸೊಪ್ಪಿನ ಬೆಟ್ಟಗಳ ಸವಲತ್ತುಗಳು ಅರಣ್ಯ ಹಕ್ಕುಗಳಾಗಿವೆ. ಆದ್ದರಿಂದ ಈ ಕಾಯಿದೆಯಲ್ಲಿ ಅರಣ್ಯ ಹಕ್ಕುಗಳ ಮಾನ್ಯತೆಗಾಗಿ ಇರುವ ವಿಧಾನಗಳನ್ನನುಸರಿಸಿ ಬೆಟ್ಟ ವಹಿವಾಟುದಾರರು ತಮ್ಮ ಸವಲತ್ತುಗಳಿಗೆ ಕಾನೂನು ಬದ್ಧ ಮಾನ್ಯತೆ ಪಡೆಯಬಹುದಾಗಿದೆ. ಆದರೆ ಈ ಹಿಂದಿನ ಮಾನ್ಯತೆಗಿಂತ ಹೆಚ್ಚಿನ ಯಾವುದೇ ಮಾನ್ಯತೆ ಇದರಲ್ಲಿ ಸಿಗಲಾರದು.

## ಇತರ ಉಲ್ಲೇಖಾರ್ಹ ಸಂಗತಿಗಳು

1. ಸೊಪ್ಪಿನ ಬೆಟ್ಟಗಳ ವಿಷಯದಲ್ಲಿ ಚರ್ಚಿತವಾಗುವ ಸಂಗತಿಯೆಂದರೆ ಇದು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿದೆಯೇ, ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿಯೇ ಎಂಬುದು. ಸೊಪ್ಪಿನಬೆಟ್ಟಗಳ

ಸವಲತ್ತುಗಳನ್ನು ಹಕ್ಕುಪತ್ರಿಕೆ ಕಾಲಂ 11ರ "ಇತರ ಹಕ್ಕುಗಳು" ಎಂಬ ಕಾಲಂನ ಅಡಿ ನಮೂದಿಸಲಾಗುತ್ತದೆ. ಹಾಗೆಯೇ ಪ್ರತಿ ಕಂದಾಯ ಗ್ರಾಮ ಚಾವಡಿಯಲ್ಲಿಯೂ ನಮೂನೆ 1ಎ ಗ್ರಾಮ ಅರಣ್ಯ ರಜಿಸ್ಟರ್' ಅನ್ನು ಕಾದಿಡಲಾಗುತ್ತದೆ. ಇದರಲ್ಲಿ (1) ಸ.ನಂ.. (2) ಪೋಟ ನಂ.. (3) ಫಾರೆಸ್ಟ್ ನಂ. (ಇದ್ದಲ್ಲಿ). (4) ಗ್ರಾಮ ಅರಣ್ಯ. (5) ಸಂರಕ್ಷಿತ ಅರಣ್ಯ. (5ಎ) ಬೆಟ್ಟ (ರೆವಿನ್ಯೂ ಡಿಪಾರ್ಟಮೆಂಟ್ ಕಬಜಾ) (5ಬಿ) ಹಕ್ಕಲ್. (6) ಕಾದಿಟ್ಟ ಅರಣ್ಯ. (6ಎ) ಮೈನರ್ ಜಂಗಲ್. (6ಬಿ) ಪ್ರಾಪರ್ ಜಂಗಲ್. (7) ಒಟ್ಟು ಕ್ಷೇತ್ರ. (8) ಫಾರೆಸ್ಟ ಸೆಟ್ಲಮೆಂಟ್‌ನಲ್ಲಿ ನಮೂದಿಸಲಾದ ಹಕ್ಕುಗಳು. (9) ಕ್ರಮಪಡಿಸಲ್ಪಟ್ಟ ಕ್ಷೇತ್ರ (10) ಶರಾ ಎಂಬ ಕಾಲಂಗಳಿರುತ್ತವೆ. ಇಲ್ಲಿ ಬೆಟ್ಟಕ್ಕೆ ಮಾತ್ರ ರೆವಿನ್ಯೂ ಡಿಪಾರ್ಟಮೆಂಟ್ ಕಬಜಾ ಎಂದು ನಮೂದಿಸಲಾಗಿದೆ. ಹಾಗೆಯೇ ಅರಣ್ಯ ಇಲಾಖೆಯಲ್ಲಿಯೂ ಈ ಎಲ್ಲ ದಾಖಲೆಗಳನ್ನಿಡಲಾಗುತ್ತದೆ. ಇದಕ್ಕೆ ಪೂರಕವಾಗಿ ಬೆಟ್ಟ ಸವಲತ್ತುಗಳಲ್ಲಿ ಭೂಮಿ ವಿಭಾಗಣೆ, ಭೂಮಿ ಮಂಜೂರಾತಿ ಹಾಗೂ ಸವಲತ್ತುಗಳ ಸದುಪಯೋಗಕ್ಕೆ ಸಂಬಂಧಿಸಿದ ಅಧಿಕಾರಗಳನ್ನು ಕಂದಾಯ ಇಲಾಖೆಗೂ, ಮರಗಳ ಕಡಿತ, ನಾಟಾ ಮಂಜೂರಾತಿ, ಕಾದಿಟ್ಟ ಮರಗಳಿಗಾಗುವ ನಷ್ಟ ನಿಯಂತ್ರಣ, ಮರಗಳ ಸಂರಕ್ಷಣೆ, ಗಿಡಗಳನ್ನು ನೆಡುವದು ಇವುಗಳಿಗೆ ಸಂಬಂಧಿಸಿದ ಅಧಿಕಾರಗಳನ್ನು ಅರಣ್ಯ ಇಲಾಖೆಗೆ ನೀಡಲಾಗಿದೆ. ಬೆಟ್ಟಗಳ ಸೂಕ್ತ ನಿರ್ವಹಣೆ ಹಾಗೂ ಅಭಿವೃದ್ಧಿಯ ಕುರಿತು ರೈತರಿಗೆ ತಿಳುವಳಿಕೆ ನೀಡುವ ಸಂದರ್ಭದಲ್ಲಿ ಅರಣ್ಯ ಹಾಗೂ ಕೃಷಿ ಇಲಾಖೆಗಳಿಗೆ ಈ ಹೊಣೆಗಾರಿಕೆ ನೀಡಲಾಗಿದೆ. ಅಂದರೆ ಇಲ್ಲಿ ಕಂದಾಯ, ಅರಣ್ಯ, ಕೃಷಿ (ತೋಟಗಾರಿಕೆ) ಇಲಾಖೆಗಳಿಗೆ ಸಾಮೂಹಿಕವಾಗಿ ಬೆಟ್ಟಗಳ ನಿರ್ವಹಣೆಯ ಉಸ್ತುವಾರಿಯನ್ನು ನೀಡಲಾಗಿದೆಯೇ ಹೊರತು ಇದು ಯಾವುದೇ ಒಂದು ಇಲಾಖೆಯ ಜವಾಬ್ದಾರಿಯಲ್ಲ.

2ಇನ್ನಿತರ ಅರಣ್ಯ ಸವಲತ್ತುಗಳಲ್ಲಿಯೂ ಸಹ ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಗಳನ್ನು ಇವುಗಳ ಜಂಟಿ ನಿರ್ವಹಣೆಗಾಗಿ ನಿಯೋಜಿಸಲಾಗಿದೆ. ಉದಾಹರಣೆಗೆ ಸ್ಟ್ರಿಪ್ಪುಗಳ ವಿಷಯದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯು ಜಿಲ್ಲಾಧಿಕಾರಿಯೊಡನೆ ಸಮಾಲೋಚಿಸಬೇಕೆಂದು ಸೆ. 131 ಸಿ (xvi) ಹೇಳುತ್ತದೆ.

3) ಬೆಟ್ಟ ಸವಲತ್ತುಗಳೂ ಸೇರಿದಂತೆ ಅರಣ್ಯ ಸವಲತ್ತುಗಳನ್ನು ಮೊಟಕುಗೊಳಿಸುವ. ಬದಲಾಯಿಸುವ ಅಥವಾ ರದ್ದುಪಡಿಸುವ ಸಂಪೂರ್ಣ ಅಧಿಕಾರ ರಾಜ್ಯ ಸರಕಾರಕ್ಕಿದೆಯಾದರೂ ಈ ಸವಲತ್ತುಗಳ ದುರುಪಯೋಗವಾಗದಂತೆ ತಡೆಯಲು ಅಧಿಕಾರಿಗಳ ಮಟ್ಟದಲ್ಲಿ ತಾತ್ಕಾಲಿಕ ರದ್ದತಿ ಹಾಗೂ ತದನಂತರ ಅಭಿವೃದ್ಧಿ ಮಾಡಿ ಪುನಃ ನೀಡುವ ವ್ಯವಸ್ಥೆಯನ್ನಿಡಲಾಗಿದೆ. ಅಂದರೆ ಸವಲತ್ತುಗಳು ಒಟ್ಟಾರೆ ಅರಣ್ಯಗಳ ಸ್ಥಿತಿಗತಿಗೆ ಹಾನಿಯನ್ನುಂಟು ಮಾಡದಂತೆ ಮೇಲ್ವಿಚಾರಣೆ ನಡೆಸುವ ಜವಾಬ್ದಾರಿಯೂ ಅಧಿಕಾರಿಗಳ ಮೇಲಿವೆ. ಈ ಕುರಿತು ಆಗಾಗ ರೈತರನ್ನು ಎಚ್ಚರಿಸುತ್ತಿರಬೇಕೆಂದು ಸ್ಪಷ್ಟವಾಗಿ ತಿಳಿಸಲಾಗಿದೆ. ( ಸೆ. 122. ಸೆ. 131 **F** (xi) )

4) ಹಾಸಲು ದರ ಅಥವಾ ರಾಜಧನದ ಕುರಿತು ಆಗಾಗ ಬೆಟ್ಟದಾರರ ಮಟ್ಟದಲ್ಲಿ ಚರ್ಚೆ ಕೇಳಿಬರುತ್ತದೆ. ಹಿಂದೆ ಒಂದು ರೂಪಾಯಿ ಹಾಸಲುದರದಲ್ಲಿ ವುರವನ್ನು ನೀಡಲು ವಿಭಾಗೀಯ ಅರಣ್ಯಾಧಿಕಾರಿಗೆ ಅಧಿಕಾರವಿತ್ತು ಎಂಬುದು ನಿಜ. ಆದರೆ ನಂತರ ಇದನ್ನು ಬದಲಾಯಿಸಿ ಹಾಸಲು ದರವನ್ನು ಪುನರ್ವಿಮರ್ಶಿಸುವ ಅಧಿಕಾರವನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ನೀಡಲಾಗಿದ್ದು ಅದರಂತೆ ಸರಕಾರ ಹಾಸಲು ದರವನ್ನು ನಿರ್ಣಯಿಸುತ್ತದೆ. (ಕರ್ನಾಟಕ ಅರಣ್ಯ ಕಾನೂನು 1963 ಸೆ. 101 ಎ (1). ಇದೇ ಸೆಕ್ಷನ್ನಿನ (2)ರ ಪ್ರಕಾರ. ಹಿಂದಿನ ಕಾನೂನಿನಂತೆ ರಾಜಧನ ಅಥವಾ ಇನ್ನಿತರ ಯಾವುದೇ ಹೆಸರಿನಿಂದ ಕರೆದಿರಬಹುದಾದ ಮೌಲ್ಯವು ಇನ್ನು ಮುಂದೆ ಹಾಸಲುದರ ಅಥವಾ ಸೀನಿಯೋರೇಜ್ ದರ ಎಂದು ಕರೆಯಲ್ಪಡುತ್ತದೆ. ಹಾಗೂ ಇದೇ ಸೆಕ್ಷನ್ನಿನ (1)ರಂತೆ ನಿರ್ಣಯಿಸಲ್ಪಡುತ್ತದೆ.

5 ಉತ್ತರ ಕನ್ನಡವನ್ನು ಹೊರತು ಪಡಿಸಿ ಇನ್ನಿತರ ಜಿಲ್ಲೆಗಳ ಅರಣ್ಯ ಸವಲತ್ತುಗಳಲ್ಲಿ ಬೆಟ್ಟ ಸವಲತ್ತುಗಳನ್ನು ಕುರಿತು ಪ್ರಸ್ತಾಪಿಸಲಾಗಿಲ್ಲ. ಆದರೆ "ಮೈಸೂರು ಅರಣ್ಯ ಕಾನೂನು 1900 ಹಾಗೂ ಕೈಪಿಡಿ 1957ರಂತೆ ಶಿವಮೊಗ್ಗ ಹಾಗೂ ಇನ್ನಿತರ ಜಿಲ್ಲೆಗಳಲ್ಲೂ ಸ್ವೊನ ಬೆಟ್ಟ ಸವಲತ್ತುಗಳನ್ನು ನೀಡಲಾಗಿತ್ತು" ಎಂದು ಕರ್ನಾಟಕ ಅರಣ್ಯ ಕೈಪಿಡಿಯ ಸೆ. 120ರಲ್ಲಿ ಪ್ರಸ್ತಾಪಿಸಲಾಗಿದೆಯಲ್ಲದೆ ಕರ್ನಾಟಕ

ಅರಣ್ಯ ಕಾನೂನಿನ ಸೆ. 117ರಲ್ಲಿ "ಈ ಹಿಂದಿರುವ ಎಲ್ಲ ಸವಲತ್ತುಗಳು ಮುಂದುವರಿಯುತ್ತವೆ" ಎಂದು ಹೇಳಲಾಗಿದೆ. ಕರ್ನಾಟಕ ಭೂ ಕಂದಾಯ ಕಾನೂನು 1964ರ ಸೆ. 79 (2)ರಲ್ಲಿ ಸಹ ಈ ಸವಲತ್ತುಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು ಇವೆಲ್ಲವೂ ಇಂದಿಗೂ ಅಬಾಧಿತವಾಗಿರುತ್ತದೆ. ಹಾಗೂ ಬೆಟ್ಟ ನೀಡಿಕೆಯ ಮೂಲ ಆದೇಶದಂತೆ ಅವು ಮುಂದುವರಿಯುತ್ತವೆ ಎಂದು ಅರ್ಥೈಸಬಹುದಾಗಿದೆ.

## ಬೆಟ್ಟಗಳ ದುಸ್ಥಿತಿಗೆ ಕಾರಣಗಳು

ಜಿಲ್ಲೆಯ ಸೊಪ್ಪಿನ ಬೆಟ್ಟಗಳು ಹಾಗೂ ಇತರ ಅರಣ್ಯಗಳ ಸ್ಥಿತಿಗತಿಗಳ ಕುರಿತು ಅರಣ್ಯ ಇಲಾಖೆ 1986ರಲ್ಲಿ ನೀಡಿದ ವರದಿಯ ಪ್ರಕಾರ ಕಾದಿಟ್ಟ ಅರಣ್ಯಗಳು ಶೇ.20 ರಷ್ಟು ಪೂರ್ತಿ ಹಾಳಾಗಿದ್ದು ಜನವಸತಿ ಪ್ರದೇಶದ ಸಮೀಪವಿರುವ ಶೇ. 40ರಷ್ಟು ಪ್ರದೇಶ ಸಾಮಾನ್ಯವಾಗಿದೆ. ಹಾಗೂ ಜನವಸತಿಯಿಂದ ದೂರ ಗುಡ್ಡದ ಕಡಿದಾದ ಇಳಿಜಾರಿನಲ್ಲಿರುವ ಶೇ. 40ರಷ್ಟು ಉತ್ತಮ ಸ್ಥಿತಿಯಲ್ಲಿದೆ. ಆದರೆ ಕಿರು ಅರಣ್ಯ ಹಾಗೂ ಸೊಪ್ಪಿನ ಬೆಟ್ಟಗಳಲ್ಲಿ ಶೇ. 70ರಷ್ಟು ಹಾಳಾಗಿದ್ದು. ಶೇ. 30 ಮಾತ್ರ ಉತ್ತಮ ಸ್ಥಿತಿಯಲ್ಲಿವೆ. ಇವುಗಳ ಪೈಕಿ ಕಿರು ಅರಣ್ಯ ಪ್ರದೇಶಗಳು ಅತ್ಯಂತ ಹೀನಾಯ ಸ್ಥಿತಿಯಲ್ಲಿವೆ.

ಆದ್ದರಿಂದ ಬೆಟ್ಟ ವಹಿವಾಟುದಾರನ ಸಮಸ್ಯೆಗಳನ್ನು ಒಳಗೊಂಡು ಸೊಪ್ಪಿನ ಬೆಟ್ಟಗಳ ಸಮಸ್ಯೆ ಹಾಗೂ ಅಭಿವೃದ್ಧಿಯ ಕುರಿತು ನಾವು ಚಿಂತಿಸಬೇಕಾಗಿದೆ. ಸೊಪ್ಪಿನ ಬೆಟ್ಟಗಳ ಇಂದಿನ ಸ್ಥಿತಿಗತಿಗೆ ಅನೇಕ ಕಾರಣಗಳನ್ನು ನಾವು ಗುರುತಿಸಬಹುದು.

ಅ) ಸೊಪ್ಪಿನ ಬೆಟ್ಟಗಳಿಂದ ಸೊಪ್ಪು, ದರಕು, ಕಟ್ಟಿಗೆ ಮುಂತಾದವುಗಳನ್ನು ಸ್ವಂತ ಉಪಯೋಗಕ್ಕೆ ಮಾತ್ರ ತೆಗೆದುಕೊಳ್ಳುವ ಸವಲತ್ತನ್ನು ವಹಿವಾಟುದಾರರಿಗೆ ನೀಡಲಾಗಿದ್ದು, ಇಲ್ಲಿ ಗಿಡಗಳನ್ನು ಬೆಳೆಸಲು, ಅಥವಾ ಕಿರು ಅರಣ್ಯ ಉತ್ಪನ್ನಗಳಿಂದ ಬರುವ ಲಾಭವನ್ನು ಪಡೆಯಲು ಅವರಿಗೆ ಯಾವುದೇ ಆರ್ಥಿಕ ಉತ್ತೇಜನ ನೀಡಲಾಗಿಲ್ಲ. ಅರಣ್ಯಾಭಿವೃದ್ಧಿ ಹಾಗೂ ಸಂರಕ್ಷಣಾ ಕಾರ್ಯವು ಸಾಕಷ್ಟು ವೆಚ್ಚದಾಯಕವಾಗಿದ್ದು, ಅದರಲ್ಲಿ ಬಂಡವಾಳವನ್ನು ಯಾವ

ಪ್ರತಿಫಲವೂ ಇಲ್ಲದೆ ಹೂಡುವುದು ಬಹುತೇಕ ಬೆಳೆಗಾರರಿಂದ ಸಾಧ್ಯವಿಲ್ಲ. ಇವುಗಳ ಅಭಿವೃದ್ಧಿಗಾಗಿ ಸಹಕಾರಿ ಸಂಘಗಳಿಂದಲೂ ನೇರ ಸಾಲ ಸೌಲಭ್ಯ ಯಾ ಸರಕಾರದ ಸಹಾಯಧನಗಳು ಸಿಗ ಲಾರದು. ಆದ್ದರಿಂದ ತನ್ನ ಆರ್ಥಿಕ ಇತಿಮಿತಿಯೊಳಗೆ ಚಿಂತಿಸಿ ಸೊಪ್ಪಿನ ಬೆಟ್ಟಗಳನ್ನು ನಿರ್ವಹಿಸುವುದು ಬೆಳೆಗಾರನಿಗೆ ಅನಿವಾರ್ಯ.

ಆ)ಪಶುಸಂಗೋಪನೆ ಇಂದು ದಿನೇ ದಿನೇ ದುಬಾರಿಯಾಗುತ್ತಿದೆ. ವರ್ಷದ ಹನ್ನೆರಡೂ ತಿಂಗಳು ದನಗಳನ್ನು ಕಟ್ಟಿ ಸಾಕುವುದು ಸುಲಭವಲ್ಲ. ಆದ್ದರಿಂದ ಆರ್ಥಿಕ ಕಾರಣಗಳಿಗಾಗಿ ಹಾಗೂ ದನಕರು ಗಳ ಆರೋಗ್ಯ ದೃಷ್ಟಿಯಿಂದಲೂ ಚಿಂತಿಸಿ ಅನೇಕ ಬೆಳೆಗಾರರು ಮಳೆಗಾಲದ 4-5 ತಿಂಗಳು ಹಸಿರು ಹುಲ್ಲು ಬೆಟ್ಟದಲ್ಲಿ ಲಭ್ಯವಿರು ವಾಗ ಅಲ್ಲಿ ದನ ಮೇಯಿಸುತ್ತಾರೆ. ಈ ಕ್ರಮವನ್ನು ತಪ್ಪಿಸಬೇಕೆಂದರೆ ಬೆಟ್ಟಗಳಿಂದ ಇನ್ನೂ ಹೆಚ್ಚು ಆರ್ಥಿಕ ಪ್ರತಿಫಲ ದೊರೆಯುವ ವ್ಯವಸ್ಥೆ ರೂಪುಗೊಳ್ಳಬೇಕು.

ಇ )ಸೊಪ್ಪಿನ ಬೆಟ್ಟಗಳು ಅಡಿಕೆ ತೋಟಕ್ಕೆ ಸೇರಿದ್ದಾಗಿದ್ದು. ಬೆಳೆಗಾರರಲ್ಲಿ ಪರಸ್ಪರ ತೋಟಗಳ ವಿಂಗಡನೆಯ ನಂತರ ಬೆಟ್ಟಗಳ ವಿಂಗಡ ನೆಯೂ ಆಗಬೇಕಾಗಿತ್ತು. ಆದರೆ ಇಂಥ ವಿಂಗಡನೆಯ ಅಧಿಕಾರ ವನ್ನು ಅಸಿಸ್ಟೆಂಟ್ ಕಮೀಷನರ್‌ಗೆ ನೀಡಲಾಗಿದ್ದರೂ. ಎಲ್ಲಿಯೂ ಇಂಥ ಬೆಟ್ಟ ವಿಭಾಗಣೆ ಕಾರ್ಯ ನಡೆಯದೆ ಇರುವದರಿಂದ ಇವು ಸಾಮೂಹಿಕವಾಗಿ ಉಳಿದಿವೆ ಹಾಗೂ ಇದು ಬೆಟ್ಟಗಳ ಅಭಿವೃದ್ಧಿಗೆ ದೊಡ್ಡ ತೊಡಕಾಗಿದೆ.

ಈ) ಸೊಪ್ಪಿನ ಬೆಟ್ಟಗಳ ಸವಲತ್ತುಗಳ ಉಸ್ತುವಾರಿಯನ್ನು ಕಂದಾಯ. ಅರಣ್ಯ. ಕೃಷಿ (ತೋಟಗಾರಿಕೆ) ಇಲಾಖೆಗಳಿಗೆ ಸಾಮೂಹಿಕವಾಗಿ ನೀಡಲಾಗಿದೆ. ಆದರೆ ಈ ಕಾರ್ಯವನ್ನು ಸೂಕ್ತವಾಗಿ ನಿರ್ವಹಿಸಲು ಈ ಇಲಾಖೆಗಳಿಗೆ ಈವರೆಗೂ ಸಾಧ್ಯವಾಗಿಲ್ಲ. ತೀರ್ವೆ ವಸೂಲಾತಿ (ಬೆಟ್ಟ ಸವಲತ್ತುಗಳಿಗಾಗಿಯೂ ಸೇರಿ) ಕಾರ್ಯವನ್ನು ಮಾತ್ರ ಕಂದಾಯ ಇಲಾಖೆ ನಡೆಸುತ್ತಿದೆ. ಅರಣ್ಯ ಇಲಾಖೆಯು ಸಹ ಈ ಭೂಮಿಯ ಸೂಕ್ತ ನಿರ್ವಹಣೆಯ ಬಗ್ಗೆ ಯಾವುದೇ ಕಾಳಜಿ ವಹಿಸು ತ್ತಿಲ್ಲ. ಸೊಪ್ಪಿನ ಬೆಟ್ಟಗಳ ನಿರ್ವಹಣೆ ಹಾಗೂ ಅವುಗಳ ಸ್ಥಿತಿಗತಿಗಳ ಕುರಿತು ಬೆಟ್ಟ ವಹಿವಾಟುದಾರರ ಗಮನ ಸೆಳೆಯುವ ಅಥವಾ ಅವುಗಳ ಸೂಕ್ತ ನಿರ್ವಹಣೆಯ ಕುರಿತು ಸರಿಯಾದ ತಿಳುವಳಿಕೆ

ನೀಡುವ ಕಾರ್ಯವನ್ನು ಯಾವ ಇಲಾಖೆಯೂ ಮಾಡದೆ ಇರುವದು ದುರದೃಷ್ಟಕರ. ಬೆಟ್ಟಗಳ ಸೌಲಭ್ಯದ ದುರಪಯೋಗವಾದಲ್ಲಿ ಈ ಸೌಲಭ್ಯಗಳನ್ನು ತಾತ್ಕಾಲಿಕವಾಗಿ ರದ್ದುಪಡಿಸಿ ಅದರ ಅಭಿವೃದ್ಧಿಯ ಕುರಿತು ವಹಿವಾಟುದಾರನ ಮೇಲೆ ಒತ್ತಡ ಹೇರಲು ಅಥವಾ ಅಂಥ ಅಭಿವೃದ್ಧಿಯನ್ನು ಸರಕಾರವೇ ಮಾಡಿ ಅದರ ವೆಚ್ಚವನ್ನು ವಹಿವಾಟು ದಾರನಿಂದ ವಸೂಲು ಮಾಡಿ ಸೌಲಭ್ಯಗಳನ್ನು ಮರಳಿ ನೀಡುವ ಅಧಿಕಾರ ಜಿಲ್ಲಾಧಿಕಾರಿಗೆ ಇದ್ದರೂ ಎಲ್ಲಿಯೂ ಇದನ್ನು ಚಲಾಯಿ ಸಿದ್ದು ಕಂಡುಬಂದಿಲ್ಲ.

ಉ) ಅಡಿಕೆ ತೋಟಗಳ ವಿಸ್ತಾರದಲ್ಲಿ ಗಣನೀಯ ಪ್ರಮಾಣದಲ್ಲಿ ವೃಧ್ಧಿಯಾಗಿದ್ದು ಇದಕ್ಕೆ ಪೂರಕವಾಗಿ ಸೊಪ್ಪಿನ ಬೆಟ್ಟಗಳ ಪ್ರಮಾಣದಲ್ಲಿ ವೃಧ್ಧಿಯಾಗಿಲ್ಲ. ಆದ್ದರಿಂದ ಈಗ ಇರುವ ಕಡಿಮೆ ಬೆಟ್ಟ ಕ್ಷೇತ್ರದ ಮೇಲೆ ತೀವ್ರವಾದ ಒತ್ತಡ ಬೀಳುತ್ತಿದೆ.

ಊ)ಕಿರು ಅರಣ್ಯಗಳು. ಬೋಳು ಗುಡ್ಡಗಳ ಮೇಲೆ ಅರಣ್ಯ ಇಲಾಖೆ ನೆಡುತೋಪುಗಳನ್ನು ಬೆಳೆಸಿರುವದರಿಂದ ದನಗಳ ಮೇಯುವ ಸ್ಥಳ ಗಣನೀಯವಾಗಿ ಕುಂಠಿತವಾಗಿದೆ.

ಎ) ಸತತವಾದ ಮಣ್ಣು ಕೊರೆತ. ಬೆಂಕಿಯ ಹಾವಳಿ. ಮೇಯುವ ಸಮಸ್ಯೆಗಳಿಂದಾಗಿ ಮೇಲ್ಮಣ್ಣು ಗಟ್ಟಿಯಾಗಿ ಗಿಡಗಳು ಸಹಜವಾಗಿ ಹುಟ್ಟಿ ಬೆಳೆಯುವ ಪ್ರಮಾಣ ತೀವ್ರವಾಗಿ ಕುಸಿದಿದೆ. ನೆಟ್ಟ ಗಿಡಗಳೂ ಸಹ ಬೇಗನೆ ಬೆಳೆಯುತ್ತಿಲ್ಲ. ಇಲ್ಲವೇ ದನಕರುಗಳ/ಕಾಡುಮೃಗಗಳ ಬಾಯಿಗೆ ತುತ್ತಾಗುತ್ತಿವೆ.

ಏ) ಅನೇಕ ಕಡೆ ಮಳೆಗಾಲದಲ್ಲಿ ನೆಲಸೊಪ್ಪು ಕೊಯ್ಯುವದು. ಮರ ಸವರುವದು. ಬೇಸಿಗೆಯಲ್ಲಿ ಕರಡದ ಬೇಣಕ್ಕೆ ಬೆಂಕಿ ಕೊಡುವ ದರಿಂದಾಗಿ ಸಸ್ಯಗಳ ಪುನಶ್ಚೇತನ ಹಾಗೂ ಬೆಳವಣಿಗೆಯಲ್ಲಿ ತೀವ್ರ ದುಷ್ಪರಿಣಾಮವುಂಟುಮಾಡುತ್ತಿದೆ. ಬೇಲಿಗಳನ್ನು ನಿರ್ಮಿಸಲು ಗಳಕ್ಕಾಗಿ. ಕರಡ ಸವರುವಾಗ ಕತ್ತಿಯ ಹೊಡೆತದಿಂದಾಗಿಯೂ ಸಸ್ಯಗಳ ಪುನಶ್ಚೇತನ ಕುಂಠಿತವಾಗಿದೆ.

ಐ) ನಗರಗಳು. ಚಿಕ್ಕ ಪಟ್ಟಣಗಳ ಸುತ್ತ ಉರುವಲಿಗಾಗಿ ಅನೇಕ ಬೆಟ್ಟ ಕ್ಷೇತ್ರಗಳು ಬಲಿಯಾಗುತ್ತಿವೆ.

# ಸುಸ್ಥಿರ ನಿರ್ವಹಣಾ ಕ್ರಮಗಳು

## 1. ಪೋಷಕಾಂಶಗಳ ಪೂರೈಕೆ

ಹಿಂದಿನಿಂದಲೂ ಹೇರಳವಾದ ನೈಸರ್ಗಿಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ತೋಟಗಳಿಗೆ ಪೋಷಕಾಂಶಗಳನ್ನು ಪೂರೈಸುವ ಕ್ರಮ ನಮ್ಮಲ್ಲಿ ಬೆಳೆದುಬಂದಿದೆ. ಮಳೆಗಾಲದಲ್ಲಿ ಹಸಿರು ಸೊಪ್ಪು, ಚಳಿಗಾಲದಲ್ಲಿ ಕರಡ ಹಾಗೂ ಬೇಸಿಗೆಯಲ್ಲಿ ತರಗಲೆಗಳನ್ನು ತಂದು ಕೊಟ್ಟಿಗೆಯಲ್ಲಿ ದನಗಳ ಕಾಲಡಿಗೆ ಹಾಸಿ ಅದನ್ನು ಗುಂಡಿಯಲ್ಲಿ ರಾಶಿ ಹೊಡೆದು ಅದನ್ನೇ ಗೊಬ್ಬರದ ರೂಪದಲ್ಲಿ ಮರಗಳಿಗೆ ಪೂರೈಸುವ ವಿಧಾನ ಪರಂಪರಾಗತವಾದದ್ದು. ಆದರೆ ಇಂದು, ಸೊಪ್ಪಿಗಾಗಿ, ಸೊಪ್ಪನ್ನು ಕಡಿಯುವವರಿಗಾಗಿ ಹುಡುಕಾಟದ ಅನಿವಾರ್ಯತೆ ಉಂಟಾಗುತ್ತಿರುವ ಕಾಲದಲ್ಲಿ, ನಾವು ಹೆಚ್ಚು ಲಾಭ ತರುವ ಪರ್ಯಾಯಗಳತ್ತ ದೃಷ್ಟಿ ಹಾಯಿಸಲೇ ಬೇಕಾಗಿದೆ.

ನಾವು ಉಪಯೋಗಿಸುವ ಸಾವಯವ, ರಾಸಾಯನಿಕ ಹಾಗೂ ಜೈವಿಕ ಗೊಬ್ಬರಗಳ ಗುಣಮಟ್ಟ ಉಪಯೋಗಿಸುವ ವಿಧಾನಗಳ ಕುರಿತು ಪ್ರೊ॥ ಎಲ್.ಎ. ದೀಕ್ಷಿತ್ ಅವರು ಬರೆದ ಮೂರು ಪುಸ್ತಕಗಳು ಪ್ರತಿಯೊಬ್ಬ ಕೃಷಿಕನ ಪಾಲಿಗೆ ಅತ್ಯಂತ ಅನುಕರಣೀಯವಾಗಿವೆ. ಹಿಂದೆಲ್ಲ ಕೇವಲ ಸೊಪ್ಪು, ದರಕು, ಸಗಣಿಗಳಿಗೆ ಸೀಮಿತವಾಗಿದ್ದ ಪೋಷಕಾಂಶಗಳ ಪೂರೈಕೆಯ ಕ್ರಮಗಳಿಗೆ ನಂತರ ಖನಿಜ ಲವಣಾಂಶಗಳು, ಲಘು ಹಿಂಡಿಗಳು, ಎರೆಗೊಬ್ಬರ, ಮೀನುಗೊಬ್ಬರ ಸುಣ್ಣ ಇತ್ಯಾದಿ ಸೇರಿಕೊಂಡವು. ಇದೀಗ ಈ ಸಾಲಿಗೆ ಸೂಕ್ಷ್ಮಾಣು ಜೀವಿಗಳು ಸಹ ಭಾರಿ ಗದ್ದಲದೊಂದಿಗೆ ಸೇರಿ ಕೊಂಡಿವೆ. ಕೆಲವೇ ಹನಿ ಪಂಚಗವ್ಯದಿಂದ ಅನೇಕ ಕೋಟಿ ಸೂಕ್ಷ್ಮಾಣು ಜೀವಿಗಳನ್ನು ಮಣ್ಣಿಗೆ ಸೇರಿಸಬಲ್ಲ, ಕೆಲವೇ ಜೀವಾಮೃತ ಬಿಂದುಗಳಿಂದ ರಾಶಿ ಗಟ್ಟಲೆ ಸೊಪ್ಪು, ದರಕು, ರಾಸಾಯನಿಕ ಗೊಬ್ಬರಗಳಿಗೆ ಸಮನಾದ ಪೋಷಕಾಂಶ ನೀಡಬಲ್ಲ ತಾಂತ್ರಿಕತೆಗಳು ಜನಪ್ರಿಯವಾಗತೊಡಗಿವೆ. ಬೇರೆ ಬೇರೆ ಬ್ರ್ಯಾಂಡ್‌ಗಳಲ್ಲಿ ಜೀವಾಣು ಗೊಬ್ಬರದ ಪುಡಿಗಳು ಮಾರುಕಟ್ಟೆಗೆ ಲಗ್ಗೆ ಇಡತೊಡಗಿವೆ. ವಿಧಾನಗಳಲ್ಲೂ ಅಷ್ಟೇ; ಗೊಬ್ಬರ ಗುಂಡಿಯಿಂದ

ಕಂಪೋಸ್ಟ್. ರಸಾವರಿ. ಸ್ಲರಿ ಹಾಯಿಸುವವರೆಗೆ ನಾವು ಬೆಳೆದಿದ್ದೇವೆ. ಬುಡಕ್ಕಷ್ಟೇ ಗೊಬ್ಬರ ಕೊಡುವ ವಿಧಾನದಿಂದ ಕಾಂಡಕ್ಕೆ. ಎಲೆಗಳಿಗೂ ಪೋಷಕಾಂಶಗಳನ್ನು ಸಿಂಪಡಿಸುವವರೆಗಿನ ಕ್ರಮಗಳು ಪ್ರಚಾರ ಗಿಟ್ಟಿಸಿ ಕೊಳ್ಳುತ್ತಿವೆ ಇವೆಲ್ಲದರ ಕಾರ್ಯಕ್ಷಮತೆಯ ಕುರಿತು ಸರಿಯಾಗಿ ಸಂಶೋಧನೆ ಆಗಬೇಕಾಗಿದೆ. ಆದರೆ ಒಂದಂತೂ ಸತ್ಯ: ನಾವು ಪರ್ಯಾಯಗಳತ್ತ ಸಾಕಷ್ಟು ದೂರ ಕ್ರಮಿಸಿದ್ದೇವೆ. ಆದ್ದರಿಂದ. ವಿವಿಧ ಜೈವಿಕ ಗೊಬ್ಬರಗಳು ಸಾವಯವ ಗೊಬ್ಬರಗಳು ಇತ್ಯಾದಿಗಳ ಕುರಿತು ವ್ಯವಸ್ಥಿತ ರೀತಿಯಲ್ಲಿ ಸಂಶೋಧನೆ ಹಾಗೂ ಸೂಕ್ತ ಉತ್ಪನ್ನಗಳ ತಯಾರಿಕೆ ಕುರಿತು ರೈತರ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಮಣ್ಣು ಸಂಶೋಧನಾ ಕೇಂದ್ರಗಳ ಜಾಲವನ್ನು ತಳಮಟ್ಟದವರೆಗೂ ಅಭಿವೃದ್ಧಿಪಡಿಸಬೇಕಾಗಿದೆ.

ಹಸಿರೆಲೆ ಗೊಬ್ಬರಕ್ಕೂ ಅನೇಕ ಪರ್ಯಾಯಗಳು ನಮ್ಮ ಮುಂದಿವೆ. ಗ್ಲಿರಿಸೀಡಿಯಾ. ಕ್ಯಾಲಿಯಾಂಡ್ರಾ ಸೀಮೆತಂಗಡಿ ಮುಂತಾದವುಗಳನ್ನು ಬೇಲಿಗುಂಟ ಅಥವಾ ಸೀಮಿತ ಪ್ಲಾಟುಗಳಲ್ಲಿ ನೆಟ್ಟು ಬೆಳೆಸಿ ಹಸಿರಾಗಿಯೇ ಮರಗಳಿಗೆ ಪೂರೈಸುವದು ಲಾಭದಾಯಕವಾಗಿ ಕಂಡು ಬಂದಿದೆ. ಹಾಗೆಯೇ ತೋಟದಲ್ಲಿಯೇ ವಿವಿಧ ಜಾತಿಯ ದ್ವಿದಳ ಬಳ್ಳಿಗಳನ್ನು. ಮುಚ್ಚಿಗೆ ಬೆಳೆಗಳನ್ನು ಬೆಳೆಸಿ ತೋಟದ ಸಾರ ಹೆಚ್ಚಿಸುವ ವಿಧಾನಗಳೂ ಇವೆ. ವೆಲ್ವೆಟ್‌ಬೀನ್ಸ್. ಶಂಖಪುಷ್ಪ ಸೆಂಟ್ರೋಸೀಮಾ. ಮುಳ್ಳಿಲ್ಲದ ನಾಚಿಗೆ. ಲ್ಯೂಸೆರ್ನ್ ಇತ್ಯಾದಿಗಳನ್ನು ತೋಟದಲ್ಲಿ ಬೆಳೆದು ಸಾರಜನಕ ಸ್ಥಿರೀಕರಣ ಹಾಗೂ ಹಸಿರೆಲೆ ಗೊಬ್ಬರ ಪೂರೈಕೆ ಎರಡನ್ನೂ ಏಕಕಾಲದಲ್ಲಿ ಮಾಡ ಬಹುದು. ಈ ಸಾಲಿಗೆ ಈಗ ಅಜೋಲಾ ಕೂಡ ಸೇರಿದೆ. ಹಿಂದೆಲ್ಲ ಕಳೆಯಂತೆ ಕಂಡು ತಲೆ ಕೆಡಿಸುತ್ತಿದ್ದ ಗಿಡಗಳೇ ಇಂದು ಪೋಷಕಾಂಶಗಳ ಪೂರೈಕೆಗೆ ಕಚ್ಚಾ ವಸ್ತುಗಳಾಗತೊಡಗಿವೆ. ಇದರೊಡನೆ ಉಪ ಬೆಳೆಗಳಾದ ಕೊಕ್ಕೋ. ಬಾಳೆ ಇವೂ ಸಹ ತೋಟದಲ್ಲಿ ಕಳಿಯಬಲ್ಲ ವಸ್ತುಗಳ ಪೂರೈಕೆದಾರರಾಗಿ ಕೆಲಸ ಮಾಡಲಾರಂಭಿಸಿವೆ.

ಸೊಪ್ಪಿನ ಕಡಿತದ ವಿಧಾನಗಳಲ್ಲಿ ಸುಧಾರಣೆ ಅಗತ್ಯ. ಕಡಿಯುವದಾದಲ್ಲಿ ಡಿಸೆಂಬರ್ 15ರ ನಂತರ. ಮರದ ಕೆಳಭಾಗದ 2/3 ಭಾಗದ ಸೊಪ್ಪನ್ನು ಮಾತ್ರ ಕಡಿಯಬೇಕು.

ಹೀಗೆ ತೋಟದಲ್ಲಿ ಮರಗಳಿಗೆ ಪೋಷಕಾಂಶಗಳನ್ನು ಪೂರೈಸಬಲ್ಲ ಹತ್ತು ಹಲವು ವಿಧಾನಗಳಿದ್ದು ಅವುಗಳನ್ನು ಅಳವಡಿಸಿಕೊಂಡು ಸೊಪ್ಪಿನ ಬೆಟ್ಟಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಸಾಧ್ಯವಿದೆ.

**2. ಉರುವಲು ಕಟ್ಟಿಗೆಗೆ ಪರ್ಯಾಯಗಳು**

ಉರುವಲು ಕಟ್ಟಿಗೆಗೆ ಪರ್ಯಾಯಗಳು ಸಹ ಇಂದು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದು ಇವುಗಳ ಬಳಕೆ ವ್ಯಾಪಕವಾಗಿ ಹೆಚ್ಚಬೇಕಾಗಿದೆ. ಗೊಬ್ಬರ್ ಅನಿಲ ಸ್ಥಾವರಗಳ ನಿರ್ಮಾಣ ವೆಚ್ಚ ಅಧಿಕವಾಗಿದ್ದು ಸರಕಾರದ ಸಹಾಯಧನದಲ್ಲಿ ಹೆಚ್ಚಳವಾಗಬೇಕು. ಅಸ್ತ್ರ ಸ್ನಾನದ ಒಲೆ ಹಾಗೂ ಅಸ್ತ್ರ ಅಡಿಕೆ ಬೇಯಿಸುವ ಒಲೆ. ಹಾಗೂ ಸೌರ ಒಲೆಗಳನ್ನು ಬಳಸಿ ಉರುವಲು ಕಟ್ಟಿಗೆಗಳ ಬಳಕೆ ಕಡಿಮೆ ಮಾಡಬಹುದು. ಸ್ಥಾನೀಯ ಸಹಕಾರಿ ಸಂಘಗಳ ಮೂಲಕ ಇವು ಗಳಿಗೆ ಸಹಾಯಧನ ದೊರಕುವಂತಾಗುವುದು ಸೂಕ್ತವಾಗಿದೆ.

**3. ಪಶು ಸಂಗೋಪನೆ**

ಪಶು ಸಂಗೋಪನೆಯು ಸೊಪ್ಪಿನ ಬೆಟ್ಟಗಳ ಅಭಿವೃದ್ಧಿಗೆ ಒಂದು ದೊಡ್ಡ ತೊಡಕಾಗಿದೆ. ದನಕರುಗಳನ್ನು ವರ್ಷವಿಡೀ ಅಥವಾ ಮಳೆಗಾಲದ 6 ಆರುತಿಂಗಳಲ್ಲಿ ಬಿಟ್ಟು ಮೇಯಿಸುವುದಿರಿಂದ ಬೆಟ್ಟಗಳಲ್ಲಿ ನೆಟ್ಟ ಗಿಡಗಳು ಮೇಲಕ್ಕೇಳುವುದಿಲ್ಲ ಹಾಗೂ ನೆಲ ಕ್ರಮೇಣ ಗಟ್ಟಿಯಾಗುತ್ತ ಹೋಗುತ್ತದೆ. ಆದರೆ ಕಟ್ಟಿ ಸಾಕುವುದು ದಿನೇ ದಿನೇ ದುಬಾರಿಯಾಗುತ್ತಿದೆ. ಮಲೆನಾಡಿನಲ್ಲಿ ಭತ್ತದ ಗದ್ದೆಗಳು ಅಡಿಕೆತೋಟಗಳಾಗುತ್ತಿದ್ದು ಸುತ್ತಲಿನ ಅರೆಮಲೆನಾಡು ಪ್ರದೇಶ ಗಳಿಂದ ಭತ್ತದ ಹುಲ್ಲನ್ನು ದುಬಾರಿದರದಲ್ಲಿ ತರಿಸಿಕೊಳ್ಳಲಾಗುತ್ತದೆ. ತೋಟದ ಸುತ್ತಲಿನ ಖುಷ್ಕಿ ಪ್ರದೇಶಗಳೆಲ್ಲ ಅಡಿಕೆ ತೋಟಗಳಾಗಿ ಮಾರ್ಪಟ್ಟು ಹಸಿರು ಹುಲ್ಲನ್ನು ಬೆಳೆಸಲು ಸ್ಥಳವಿಲ್ಲದಂತಾಗುತ್ತಿದೆ. ಅಲ್ಲದೆ ಕೂಲಿ ಅಭಾವ ದೊಡ್ಡ ಸಮಸ್ಯೆಯಾಗುತ್ತಿದೆ. ಈ ಎಲ್ಲ ಕಾರಣಗಳಿಂದ ದನಕರಗಳನ್ನು ವರ್ಷದ ಕೆಲಕಾಲವಾದರೂ ಬಿಟ್ಟು ಮೇಯಿಸುವುದು ಅನಿವಾರ್ಯವಾಗುತ್ತಿದ್ದು ಬೆಟ್ಟಗಳ ಅಭಿವೃದ್ಧಿ ಕುಂಠಿತಗೊಳ್ಳುತ್ತಿದೆ.

ಆದ್ದರಿಂದ ಈ ಸಮಸ್ಯೆಗೆ ಹಲವು ಹಂತಗಳಲ್ಲಿ ಪರಿಹಾರ ಮಾರ್ಗಗಳನ್ನು ಅನುಷ್ಠಾನಗೊಳಿಸಬೇಕಾಗಿದೆ. ಕಡಿಮೆ ಪಶುಗಳಿಂದ ಹೆಚ್ಚಿನ ಉತ್ಪನ್ನ ಪಡೆಯುವುದು. ನೆರಳಿನಲ್ಲಿ ಬೆಳೆಯುವ ಗಿನಿಹುಲ್ಲು ಹಾಗೂ ಇತರ ಹಸಿರು ಹುಲ್ಲು ಹಾಗೂ ಮೇವಿನ ಗಿಡಗಳನ್ನು ಬೆಟ್ಟಗಳಲ್ಲಿ ಬೆಳೆಸುವುದು. ತೋಟದ ಉತ್ಪನ್ನಗಳಾದ ಬಾಳೆ. ಅಡಿಕೆ ಹಾಳೆ ಇತ್ಯಾದಿಗಳನ್ನು ಮೇವಾಗಿ ಬಳಸುವುದು. ಭತ್ತದ ಹುಲ್ಲಿನಿಂದ ರಸಮೇವು ಅಥವಾ ಯೂರಿಯಾದಿಂದ ಉಪಚರಿಸಿದ ಮೇವನ್ನು ತಯಾರಿಸಿ ಅದರ ಉಪಯುಕ್ತತೆಯ ಮಟ್ಟವನ್ನು ಹೆಚ್ಚಿಸುವುದು. ತೋಟದಲ್ಲಿ ಮೇವಿನ ಬಳ್ಳಿಗಳನ್ನು ಪುಚ್ಚಿಗೆ ರೂಪದಲ್ಲಿ ಬೆಳೆಸುವುದು ಇವೆಲ್ಲ ಕ್ರಮಗಳನ್ನು ಪಶುಸಂಗೋಪನೆಯಲ್ಲಿ ಅಳವಡಿಸಿಕೊಂಡರೆ ಬೆಟ್ಟಗಳ ಮೇಲಿನ ಒತ್ತಡವನ್ನು ಕಡಿಮೆಮಾಡಬಹುದು.

4. **ಮಣ್ಣು ಮತ್ತು ನೀರಿನ ಸಂರಕ್ಷಣಾ ಕ್ರಮಗಳು**

ಸೊಪ್ಪಿನ ಬೆಟ್ಟಗಳಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು ಅತ್ಯವಶ್ಯವಾಗಿದೆ. ಇದಕ್ಕಾಗಿ ಅನೇಕ ವಿಧಾನಗಳನ್ನು ಅನುಸರಿಸಬಹುದು. A ಫ್ರೇಮು ಬಳಸಿ ಗುಡ್ಡದ ಸಮತಲದ ಗುಂಟ ಗುಂಡಿಗಳನ್ನು ತೋಡುವುದು. ಗಿಡಗಳನ್ನು ನೆಟ್ಟಾಗ ಅವುಗಳ ಸುತ್ತ ಸಾಸರ್ ಬಟ್ಟಲುಗಳನ್ನು ರಚಿಸುವುದು. ಕಣಿವೆಗಳಲ್ಲಿ ತಡೆಗೋಡೆ ನಿರ್ಮಿಸುವುದು ಈ ಕ್ರಮಗಳು ಮುಖ್ಯವಾಗಿವೆ. ಅನೇಕ ಕಡೆ ರೈತರು ಈ ಕ್ರಮಗಳನ್ನನುಸರಿಸಿ ನೀರಿನ ಒರತೆಯನ್ನು ಅಂತರ್ಜಲಮಟ್ಟವನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದನ್ನು ನಾವು ಕಾಣಬಹುದು.

**5. ಚೌಬೀನೇತರ ಅರಣ್ಯ ಉತ್ಪನ್ನಗಳ ಅಭಿವೃದ್ಧಿ-**

ಅರಣ್ಯದಲ್ಲಿ ದೊರಕುವ ಹಣ್ಣುಹಂಪಲುಗಳು. ಎಲೆ. ತೊಗಟೆ. ಗಿಡಮೂಲಿಕೆಗಳು. ಅಂಟು. ಧೂಪ. ರಾಳ. ಜೇನು. ಇಂತಹ ಜೈವಿಕ ಸಂಪನ್ಮೂಲಗಳನ್ನು ಕಿರು ಅರಣ್ಯ ಉತ್ಪನ್ನ ಅಥವಾ ಚೌಬೀನೇತರ ಅರಣ್ಯ ಉತ್ಪನ್ನಗಳೆಂದು ಕರೆಯುತ್ತಾರೆ. ಕೇವಲ ಕಾಡಿನಲ್ಲಿ ವಾಸಿಸುವ ಜನರಿಗಷ್ಟೇ ಸೀಮಿತವಾಗಿ ತೀರಾ ಅಸಂಘಟಿತ ಮಾರು ಕಟ್ಟೆಯನ್ನು ಹೊಂದಿದ್ದ ಈ ಕ್ಷೇತ್ರ ಇಂದು

ಅಗಾಧ ಪ್ರಮಾಣದಲ್ಲಿ ಬೆಳೆದಿದೆ. ಔಷಧಿ ಉತ್ಪನ್ನಗಳು. ರಾಸಾಯನಿಕ ದ್ರವ್ಯಗಳು. ಆಹಾರ ಉತ್ಪನ್ನಗಳು. ಎಣ್ಣೆ. ಜೈವಿಕ ಇಂಧನ. ಸುಗಂಧದ್ರವ್ಯ. ಅಲಂಕಾರಿಕ ವಸ್ತುಗಳು. ಸಾಧನೆ/ಸಲಕರಣಗಳು ಮುಂತಾದ ನೂರಾರು ಉತ್ಪನ್ನಗಳು ಈ ಚೌಬೀನೇತರ ಉತ್ಪನ್ನಗಳಿಂದ ತಯಾರಾಗಿ ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಜನರನ್ನು ಆಕರ್ಷಿಸುತ್ತಿವೆ. ಅನೇಕ ರೋಗಗಳಿಗೆ ವನಸ್ಪತಿ ಔಷಧಿಗಳೇ ಉತ್ತಮ ಪರಿಹಾರ ವೆಂಬುದನ್ನು ವಿಶ್ವದ ಜನತೆ ಕ್ರಮೇಣ ಮನಗಾಣುತಿದ್ದು ಇವುಗಳ ಬೇಡಿಕೆ ಹೆಚ್ಚಲು ಕಾರಣವಾಗಿದೆ. ಸಾವಯವ ಉತ್ಪನ್ನಗಳಿಗೆ ಮನ್ನಣೆ ಹೆಚ್ಚುತ್ತಿರುವದರಿಂದ ನಿಸರ್ಗ ಸಹಜ ಔಷಧಿಗಳು. ಕ್ರಿಮಿ ನಾಶಕಗಳಿಗೆ ಬೇಡಿಕೆ ಹೆಚ್ಚಿದೆ. ಜಾಗತಿಕವಾಗಿ ವಾರ್ಷಿಕ 20 ಸಾವಿರ ಕೋಟಿ ರೂಪಾಯಿಗಳಷ್ಟು ವಹಿವಾಟು ಈ ಕ್ಷೇತ್ರದಲ್ಲಿ ನಡೆಯುತ್ತಿದೆ ಎಂದು ವಿಶ್ವಸಂಸ್ಥೆಯ ವರದಿಗಳು ತಿಳಿಸುತ್ತಿವೆ.

ಈ ಎಲ್ಲ ಜಾಗತಿಕ ಬೆಳವಣಿಗೆಗಳನ್ನು ಸೊಪ್ಪಿನ ಬೆಟ್ಟಗಳ ಅಭಿವೃದ್ಧಿಗೆ ಪೂರಕವಾಗಿ ಬಳಸಿಕೊಳ್ಳಲು ಸಾಧ್ಯ.

**ಈ ಕೆಳಗಿನ ಚೌಬೀನೇತರ ಹಾಗೂ ಇನ್ನಿತರ ಬೆಳೆಗಳನ್ನು ಸೊಪ್ಪಿನ ಬೆಟ್ಟಗಳಲ್ಲಿ ಬೆಳೆಯಬಹುದಾಗಿದೆ.**

ಅ. ಹಣ್ಣು ಹಂಪಲುಗಳು – ಹಲಸು. ಮಾವು. ಅಪ್ಪೆ. ಮುರುಗಲು. ಉಪ್ಪಾಗೆ. ಗೇರು. ವಾಟೆ. ನೆಲ್ಲಿ. ತಾರೆ. ಅಣಲೆ. ಕವಳ. ರಾಂಪತ್ರೆ. ನೇರಳೆ. ಹುಣಸೆ. ಅಂಟುವಾಳ. ಶೀಗೆ.

ಆ. ಇಂಧನ ಬೆಳೆಗಳು – ಸಿಮಾರೂಬಾ. ಹೊಂಗೆ. ಹೊನ್ನೆ

ಇ. ಸುವಾಸನಾದ್ರವ್ಯ –ಸಾಲು ಧೂಪ. ಜಟ್ರೋಫಾ ಅಂಟು. ರಾಳಧೂಪ. ಹಲ್ಮಡ್ಡಿ ಧೂಪ. ಕೆಂಪುದಾಳೆ. ಹೈಗ.

ಈ. ಎಲೆಗಳು– ದಾಲ್ಚಿನ್ನಿ. ಕರಿಬೇವು. ಗುಳಮಾವು. ಹೇತಾರಿ. ಆಪತ್ರೆ ಚಕ್ಕೆ

ಉ. ಔಷಧಿ ಸಸ್ಯಗಳು ಕ್ರಿಮಿನಾಶಕಗಳು– ಆಡುಸೋಗೆ. ಸರ್ಪಗಂಧಿ. ಕಾಸರಕ. ಮುಕ್ಕಡಕ. ಕಾರೆ. ಹಲಗೆ

ಊ. ವೃಕ್ಷಗಳು & ಬಳ್ಳಿಗಳು– ಶ್ರೀಗಂಧ. ಬಿದಿರು. ಶಮೆ.

ಕುಮುಸಲು. ಬೆತ್ತ. ಅಕೇಶಿಯಾ. ಬಳಂಜಿ. ಶಿವಗೆ. ರಂಜಲು. ಮತ್ತಿ. ಮುತ್ತುಗ. ಬಸವನಪಾದ. ಕಕ್ಕಾಯಿ. ಮಹಾಗನಿ ಇತ್ಯಾದಿ.

ಎ. ಹಸಿರು ಗೊಬ್ಬರ & ಮೇವಿನ ವೃಕ್ಷ ಬೆಳೆಗಳು – ಗ್ಲಿರಿಸೀಡಿಯಾ. ಕ್ಯಾಲಿಯಾಂಡ್ರಾ. ಸೂಬಾಬುಲ್. ಸೀಮೆತಗಡಿ. ಹಾಳವಾರ

## ಕರ್ನಾಟಕ ಸರಕಾರದ ಮುಂದಿಡಲಾದ ಬೆಟ್ಟ ಕಾನೂನು ತಿದ್ದುಪಡಿ ಪ್ರಸ್ತಾವನೆಯ ಅಂಶಗಳು

1) **ತೋಟಿಗರಿಗೆ ಸೊಪ್ಪಿನ ಬೆಟ್ಟಗಳಲ್ಲಿ ಅವರು ರಕ್ಷಿಸಿದ ಅಥವಾ ನೆಟ್ಟು ಬೆಳೆಸಿದ ಮರ ಬಳ್ಳಿಗಳ ಯಾವುದೇ ಮರ ಮಟ್ಟೇತರ ಅರಣ್ಯ ಉತ್ಪನ್ನಗಳನ್ನು (ಹೂ,ಹಣ್ಣು, ಕಾಯಿ, ಎಲೆ) ಮೂಲ ರೂಪದಲ್ಲಿ ಅಥವಾ ಸಂಸ್ಕರಿಸಿ ಮಾರಾಟ ಮಾಡಲು ಅವಕಾಶ ನೀಡುವದು.**

2) **ತಾವೇ ನೆಟ್ಟು ಬೆಳೆಸಿದ ಔಷಧಿ ಜಾತಿಯ ಬಳ್ಳಿ, ಗಿಡ, ಟೊಂಗೆ, ತೊಗಟೆ, ಬೇರುಗಳನ್ನು ಹಾಗು ಬಿದಿರು ಮತ್ತು ಬೆತ್ತದ ಜಾತಿಯ ಸಸ್ಯಗಳನ್ನು ಮೂಲ ರೂಪದಲ್ಲಿ ಅಥವಾ ಸಂಸ್ಕರಿಸಿ ಮಾರಾಟ ಮಾಡಲು ಅವಕಾಶ ನಿಡುವುದು.**

3) **ನಿಯಮಾನುಸಾರ ಬೆಟ್ಟಗಳಲ್ಲಿ ಇರಬೇಕಾದ ಮರಗಳ ಸಂಖ್ಯೆಯ ಕೊರತೆ ತುಂಬಲು ತೋಟಿಗರು ಗಿಡ ನೆಟ್ಟಿದ್ದಲ್ಲಿ ಅಥವಾ ಅವರ ಬದಲಾಗಿ ಇಲಾಖೆಯೇ ನೆಟ್ಟು ತೋಟಿಗರಿಂದ ಅದರ ಖರ್ಚನ್ನು ವಸೂಲು ಮಾಡಿದ್ದಲ್ಲಿ ಆ ಗಿಡಗಳ ಮೇಲೆ ವ ನಾಟಾ ಮೇಲೆ ತೋಟಿಗರಿಗೆ ಈಗಿರುವ 1/3 ದಷ್ಟು ಹಕ್ಕನ್ನು 4/5ಕ್ಕೆ ಏರಿಸುವುದು ಅಂದರೆ ಈಗಿರುವ ನಿಯಮದಂತೆ ಇರುವ ಶೇ. 70 ಸರಕಾರಕ್ಕೆ ಹಾಗೂ ಶೇ.30 ತೋಟಿಗರಿಗೆ ಎಂಬ ಅನುಪಾತವನ್ನು ಶೇ. 20 ಸರಕಾರಕ್ಕೆ ಹಾಗೂ ಶೇ. 80 ತೋಟಿಗರಿಗೆ ಎನ್ನುವ ಮಟ್ಟಕ್ಕೆ ಬದಲಾಯಿಸುವುದು.**

4) **ನಿಯಮಾನುಸಾರ ಇರಬೇಕಾದ ಸಂಖ್ಯೆಯಷ್ಟು ಮರಗಳು ಬೆಟ್ಟದಲ್ಲಿ ಇದ್ದಾಗ್ಯೂ ತೋಟಿಗರು ಹೆಚ್ಚುವರಿ ಸಂಖ್ಯೆಯ ಗಿಡಗಳನ್ನು ನೆಟ್ಟಿದ್ದಲ್ಲಿ ಅದರಲ್ಲಿಯೂ ಮೇಲಿನಂತೆ ಪಾಲು ನೀಡುವದು.**

5) ಬೆಟ್ಟ ನಿರ್ವಹಣೆಯಲ್ಲಿ ಅರಣ್ಯ, ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಹಾಗೂ ಕಂದಾಯ ಇಲಾಖೆಗಳನ್ನು ಸಹ ತೋಟಿಗರೊಡನೆ ಸಹಭಾಗಿಗಳನ್ನಾಗಿ ನೀಡುವದು.

6) ಸೊಪ್ಪಿನ ಬೆಟ್ಟಗಳ ಅಭಿವೃದ್ಧಿಯ ಕುರಿತು ಸೂಕ್ತ ದಾಖಲೆಗಳನ್ನು ತಯಾರಿಸಿ ಇಡುವುದು.

ಮೇಲಿನ ಎಲ್ಲ ಅಂಶಗಳನ್ನು ಒಳಗೊಂಡ ಮುಂದೆ ಸೂಚಿಸಲಾದ ಕಾನೂನಿನ ತಿದ್ದು ಪಡಿಯನ್ನು ಕೂಡಲೇ ಘನ ಸರಕಾರ ಜಾರಿಗೆ ತಂದಲ್ಲಿ ಸೊಪ್ಪಿನ ಬೆಟ್ಟಗಳ ಅಭಿವೃದ್ಧಿ ಖಂಡಿತವಾಗಿ ಸಾಧ್ಯ.

## ಸಂಘಟಿತ ಪ್ರಯತ್ನಗಳು

1) ಸೊಪ್ಪಿನ ಬೆಟ್ಟಗಳ ಅಭಿವೃದ್ಧಿಯ ಕುರಿತು ಈಗಿರುವ ಕಾನೂನನ್ನು ಬಳಸಿ ಸರಕಾರ ಹಾಗೂ ಇಲಾಖೆಗಳು ಹೆಚ್ಚಿನ ನಿಗಾ ವಹಿಸುವುದು ಅನಿವಾರ್ಯವಾಗಿದೆ. ಹಾಗೆಯೇ ತೋಟಿಗರ ದೃಷ್ಟಿಯಿಂದಲೂ ಆಲೋಚಿಸಿ ಅವರ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವುದು ಅಗತ್ಯ. ಆದ್ದರಿಂದ ಇಲಾಖೆಗಳು (ಅರಣ್ಯ, ಕೃಷಿ, ಕಂದಾಯ ತೋಟಗಾರಿಕೆ.ಮತ್ತು ಪಶುಸಂಗೋಪನೆ) ಹಾಗೂ ತೋಟಿಗರ ಪ್ರತಿನಿಧಿಗಳನ್ನೊಳಗೊಂಡ ಸಮಿತಿಗಳನ್ನು ಪ್ರತಿ ಅರಣ್ಯ ವಿಭಾಗ/ಕಂದಾಯ ವಿಭಾಗ ಮಟ್ಟದಲ್ಲಿ ರಚಿಸುವುದು ಸೂಕ್ತ.

2) ಪ್ರತಿ ಗ್ರಾಮ ಪಂಚಾಯತದಲ್ಲಿಯೂ ಸೊಪ್ಪಿನ ಬೆಟ್ಟಗಳಲ್ಲಿ ನೆಡಲು ಸೂಕ್ತವಾದ ಸಸಿಗಳ ನರ್ಸರಿಗಳನ್ನು ಅಭಿವೃದ್ಧಿಪಡಿಸಬೇಕು. ಮಾರುಕಟ್ಟೆಯ ದೃಷ್ಟಿಯಿಂದ ಉತ್ತಮ ಗುಣಮಟ್ಟದ ಚೌಬಿನೇತರ ಉತ್ಪನ್ನಗಳನ್ನು ನೀಡುವ ಅರಣ್ಯ ವೃಕ್ಷತಳಿಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸುವ ಕಾರ್ಯ ನಡೆಯಬೇಕು. ಇವುಗಳನ್ನೆಲ್ಲ ಸಂಘಟಿತರೂಪದಲ್ಲಿ ಮಾತ್ರ ಮಾಡಬಹುದೇ ಹೊರತು ತೋಟಿಗರ ವೈಯಕ್ತಿಕ ನೆಲೆಯಲ್ಲಿ ಇದನ್ನು ಮಾಡುವುದು ಕಷ್ಟ ಸಾಧ್ಯ.

3) ಬೆಟ್ಟಗಳ ಅಭಿವೃದ್ಧಿ ಕುರಿತು ರೈತರಿಗೆ ಶಿಕ್ಷಣ ಹಾಗೂ ತರಬೇತಿ. ಸುಧಾರಿತ ಬೇಸಾಯ ಕ್ರಮಗಳ ಅಳವಡಿಕೆ ಕುರಿತು ತರಬೇತಿಗಳನ್ನು ವ್ಯಾಪಕವಾಗಿ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ಸಹಕಾರಿ ಸಂಘಗಳು ಸಕ್ರಿಯ ಪಾತ್ರ ವಹಿಸಬೇಕು.

4) ಸೊಪ್ಪಿನ ಬೆಟ್ಟಗಳ ಅಭಿವೃದ್ಧಿಗಾಗಿ ಗೇರು ಅಭಿವೃದ್ಧಿ ನಿಗಮ. ಅರಣ್ಯ ಕೈಗಾರಿಕಾಭಿವೃದ್ಧಿ ನಿಗಮಗಳ ಮಾದರಿಯಲ್ಲಿ ನಿಗಮವೊಂದನ್ನು ಅಥವಾ ಪ್ರತ್ಯೇಕ ಸಹಕಾರಿ ಸಂಘಗಳನ್ನು ರಚಿಸಿ ಈ ಭೂಮಿ ಆರ್ಥಿಕವಾಗಿ ವಹಿವಾಟುದಾರನಿಗೆ ಹಾಗೂ ಸರಕಾರಕ್ಕೆ ಲಾಭದಾಯಕವಾಗುವ ರೀತಿಯಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು.

ಮುಂದಿನ ದಿನಗಳಲ್ಲಿ ಇಂಗಾಲದ ಕ್ರೆಡಿಟ್ ಒಂದು ದೊಡ್ಡ ಉದ್ದಿಮೆಯಾಗಿ ಬೆಳೆಯಬಹುದಾಗಿದೆ. ಹಾಗೇನಾದರೂ ಆದಲ್ಲಿ ಸೊಪ್ಪಿನ ಬೆಟ್ಟಗಳು ತೋಟಿಗರಿಗೆ ಉತ್ತಮ ಆರ್ಥಿಕ ಮೂಲವಾಗಬಹುದು. ಅದಿಲ್ಲದಿದ್ದರೂ ಕಿರು ಅರಣ್ಯ/ಚೌಬೀನೇತರ ಅರಣ್ಯ ಉತ್ಪನ್ನಗಳ ಮಾರುಕಟ್ಟೆ ತುಂಬಾ ಲಾಭದಾಯಕವಾಗಿದೆ. ತೋಟದ ಅಡಿಕೆಗೆ ಪರ್ಯಾಯವಾಗಿ ಬೆಟ್ಟದಲ್ಲಿ ಅರಣ್ಯ ಉತ್ಪನ್ನಗಳನ್ನು ಬೆಳೆಸಲು ಸಾಧ್ಯವಿದೆ. ಅಲ್ಲದೆ ಬೆಟ್ಟದ ಅಭಿವೃದ್ಧಿ ತೋಟಿಗರ ನೈತಿಕ ಜವಾಬ್ದಾರಿಯಾಗಿದೆ. ಇನ್ನೊಬ್ಬರು ನಮ್ಮನ್ನು ಬೊಟ್ಟು ಮಾಡಿ ತೋರಿಸುವ ಮುನ್ನವೇ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ಇದಕ್ಕಾಗಿ ಸರಕಾರಕ್ಕಿರುವ ಜವಾಬ್ದಾರಿಯ ಕುರಿತೂ ಸಹ ಇಲಾಖೆಗಳಲ್ಲಿ ಜಾಗೃತಿ ಮೂಡಿಸಿ ಸಂಘಟಿತ ಹಾಗೂ ಸಾಮೂಹಿಕ ಕಾರ್ಯಕ್ರಮಗಳನ್ನು ಕೈಗೊಂಡು ಸೊಪ್ಪಿನ ಬೆಟ್ಟಗಳನ್ನು ಅಭಿವೃದ್ಧಿಪಡಿಸುವದು ಇಂದಿನ ಅತ್ಯಗತ್ಯ ಗಳಲ್ಲೊಂದಾಗಿದೆ.